14 ಅಕ್ಟೋಬರ್ 2025 ಮಂಗಳವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 214 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629

ಜನಮನದ ದನಿ

ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ

ಹಿರಿಯ ರಂಗಭೂಮಿ ಕಲಾವಿದ ಮತ್ತು ಹಾಸ್ಯ ನಟ ರಾಜು ತಾಳಿಕೋಟೆ ಅವರು ಸೋಮವಾರ ಅನಾರೋಗ್ಯದಿಂದ ನಿಧನರಾಗಿದ್ದಾರೆ.

ರಾಜ್ಯಕ್ಕೆ 40 ಕೋ. ರೂ. ಪಟಾಕಿ ಆದಾಯ ಠುಸ್ » 2

ಚ.ರಾ.ಪಟ್ಟಣ : ಅದ್ದೂರಿ ಗಣಪತಿ ವಿರ್ಸಜನೆ » 3

ಮಹಾದಾಯಿ ಯೋಜನೆ ನಿರ್ಲಕ್ಷ್ಯ ಸರಿಯಲ್ಲ » 4

ಔತಣ ಕೂಟದಲ್ಲಿ ಸಂಪುಟ ಪುನಾರಚನೆ ಪ್ರಸ್ತಾಪ

ಡಿ.ಕೆ.ಶಿವಕುಮಾರ್ ಸೇರಿ ಹಲವು ಸಚಿವರು ಭಾಗಿ | ಕೆಲ ಸಚಿವರೊಂದಿಗೆ ಸಿಎಂ ಪ್ರತ್ಯೇಕ ಚರ್ಚೆ

• ಪ್ರಜೋದಯ ವರದಿ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಕಾವೇರಿ ನಿವಾಸದಲ್ಲಿ ಸೋಮವಾರ ರಾತ್ರಿ ನಡೆದ ಔತಣಕೂಟ ರಾಜ್ಯ ರಾಜಕಾರಣದಲ್ಲಿ ತೀವ್ರ ಕುತೂಹಲ ಮೂಡಿಸಿದೆ. ಸಭೆಯಲ್ಲಿ ರಾಜ್ಯ ಸಚಿವ ಸಂಪುಟ ಪುನಾರಚನೆ ಬಗ್ಗೆ ಚರ್ಚೆ ನಡೆದಿದೆ.

ಸಭೆಯಲ್ಲಿ ಜಾತಿ ಗಣತಿ ವಿಚಾರ, ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆ, ಪ್ರತಿಪಕ್ಷಗಳ ಆರೋಪಗಳಿಗೆ ತಿರುಗೇಟು ನೀಡುವುದು, ಸಚಿವ ಸಂಪುಟ ಪುನಾರಚನೆ, ಸರ್ಕಾರಿ ಸ್ಥಳಗಳಲ್ಲಿ ಆರ್ಎಸ್ಎಸ್ ಕಾರ್ಯಚಟುವಟಿಕೆ ನಿಷೇಧ ವಿಚಾರಗಳು ಪ್ರಸ್ತಾಪವಾಗಿವೆ. ಇದೇ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೆಲ ಸಚಿವರೊಂದಿಗೆ ಪ್ರತ್ಯೇಕವಾಗಿ ಚರ್ಚೆ

ನಡೆಸಿದ್ದಾರೆ.

ಔತಣಕೂಟದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ರಾಮಲಿಂಗಾರೆಡ್ಡಿ, ಚೆಲುವರಾಯಸ್ವಾಮಿ, ಕೆ.ಹೆಚ್.ಮುನಿಯಪ್ಪ, ಪ್ರಿಯಾಂಕ್ ಖರ್ಗೆ, ಎಂ.ಬಿ.ಪಾಟೀಲ್, ಬೈರತಿ ಸುರೇಶ್, ಡಿ.ಸುಧಾಕರ್, ಎಂ.ಸಿ.ಸುಧಾಕರ್, ಕೆ.ಜೆ.ಜಾರ್ಜ್, ಕೆ.ವೆಂಕಟೇಶ್, ರಹೀಂ ಖಾನ್, ಶಿವಾನಂದಪಾಟೀಲ್ ಶರಣಬಸಪ್ಪ ದರ್ಶನಾಪೂರ, ಶರಣಪ್ರಕಾಶ್ ಪಾಟೀಲ್, ಆರ್.ಬಿ.ತಿಮ್ಮಾಪೂರ, ಸಂತೋಷ್ ಲಾಡ್ ಸೇರಿ ಇನ್ನು ಹಲವು ಸಚಿವರು ಆಗಮಿಸಿದ್ದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷದ ಕಳೆದ ಹಿನ್ನಲೆ ಸಚಿವ ಸಂಪುಟ ಪುನಾರಚನೆ ಆಗುವ

> ಭೋಜನಕೂಟ ಕಾರ್ಯಕ್ರಮದಲ್ಲಿ ಯಾವುದೇ ವಿಶೇಷತೆ ಇಲ್ಲ. ಸಂಪುಟ ಪುನರ್ರಚನೆಗೂ ಇಂದಿನ ಭೋಜನಕೂಟಕ್ಕೂ ಯಾವುದೇ ಸಂಬಂಧವಿಲ್ಲ. ನವೆಂಬರ್ ತಿಂಗಳಲ್ಲಿ ಯಾವುದೇ ಕ್ರಾಂತಿಯೂ ಇಲ್ಲ.
> -ಸಿದ್ದರಾಮಯ್ಯ, ಮುಖ್ಯಮಂತ್ರಿ

ಬಗ್ಗೆಯೂ ವದಂತಿಗಳು ಹಬ್ಬಿದ್ದು, ಸಚಿವರ ಬದಲಾವಣೆ ಬಗ್ಗೆ ಊಹಾ ಪೋಹಗಳು ಎದ್ದಿವೆ. ಆದರೆ, ಕೆಲವು ಸಚಿವ ಔತಣ ಕೂಟದ ಸಭೆಯನ್ನು ಸಾಮಾನ್ಯ ಎಂದು ಹೇಳಿದ್ದಾರೆ.

ಶಾಸಕರ ಬೆಂಬಲ, ಹೈಕಮಾಂಡ್ ಆಶೀರ್ವಾದ ಅವಶ್ಯ

ಸೋಮವಾರ ಮಧ್ಯಾಹ್ನ ಬಾಗಲಕೋಟೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಶಾಸಕರ ಬೆಂಬಲ, ಕಾಂಗ್ರೆಸ್ ಹೈಕಮಾಂಡ್ ಆಶೀರ್ವಾದವಿಲ್ಲದೆ ಯಾರೂ ಮುಖ್ಯಮಂತ್ರಿಯಾಗಲು ಸಾಧ್ಯವಿಲ್ಲವೆಂದು ಹೇಳಿದ್ದಾರೆ.

ಕಾಂಗ್ರೆಸ್ ಸರ್ಕಾರ ನವೆಂಬರ್‌ನಲ್ಲಿ ಎರಡೂವರೆ ವರ್ಷ ಪೂರ್ಣಗೊಳಿಸಲಿದೆ. ಈ ವೇಳೆ ಮುಖ್ಯಮಂತ್ರಿ ಬದಲಾವಣೆ ಮತ್ತು ಸಚಿವ ಸಂಪುಟ ಪುನರ್ ರಚನೆ ಬಗ್ಗೆ ಮಾತುಗಳು ಕೇಳಿ ಬರುತ್ತಿದ್ದು, ಅದನ್ನು ಕೆಲವರು ನವೆಂಬರ್ ಕ್ರಾಂತಿ ಎಂದು ಕರೆಯುತ್ತಿದ್ದಾರೆ. ನಾನು ಅಂತಹ ವಿಷಯಗಳಿಗೆ ಪ್ರತಿಕ್ರಿಯಿಸಲು ಬಯಸುವುದಿಲ್ಲ. ಹೈಕಮಾಂಡ್ ನಿರ್ಧಾರವೇ ಅಂತಿಮ. ಶಾಸಕರು ಮತ್ತು ಹೈಕಮಾಂಡ್ ಎರಡೂ ಬಹಳ ಮುಖ್ಯವೆಂದು ತಿಳಿಸಿದರು.

» ನಾಲ್ಕನೇ ಪುಟದಲ್ಲಿ

ಆಸ್ಪತ್ರೆಯಿಂದ ಮನೆಗೆ ಮರಳಿದ ದೇವೇಗೌಡರು

• ಪ್ರಜೋದಯ ವರದಿ

ಬೆಂಗಳೂರು: ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಆರೋಗ್ಯದಲ್ಲಿ ಸುಧಾರಣೆ ಕಂಡು ಬಂದ ಹಿನ್ನಲೆ ಸೋಮವಾರ ಮಣಿಪಾಲ್ ಆಸ್ಪತ್ರೆಯಿಂದ ಮನೆಗೆ ಮರಳಿದ್ದಾರೆ.

ಆಸ್ಪತ್ರೆಯಿಂದ ಮನೆಗೆ ಬಂದು ಪುಸ್ತಕ ಓದುತ್ತಿರುವ ಫೋಟೋವನ್ನು ದೇವೇಗೌಡರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ. ಕೆಲವು ದಿನಗಳನ್ನು ಆಸ್ಪತ್ರೆಯಲ್ಲಿ ಕಳೆದ ನಂತರ ಮನೆಗೆ ಮರಳಿದ್ದೇನೆ. ದೇವರ ದಯೆಯಿಂದ ನನ್ನ ಆರೋಗ್ಯ ಸ್ಥಿರವಾಗಿದೆ. ನನಗೆ ಚಿಕಿತ್ಸೆ ನೀಡಿದ್ದಕ್ಕಾಗಿ ಮಣಿಪಾಲ್ ಆಸ್ಪತ್ರೆ ವೈದ್ಯರಿಗೆ ಕೃತಜ್ಞನಾಗಿದ್ದೇನೆ. ನನ್ನ ಚೇತರಿಕೆಗಾಗಿ ಪ್ರಾರ್ಥಿಸಿದ ಎಲ್ಲರಿಗೂ ಮತ್ತು ನನ್ನನ್ನು ನೋಡಲು ಬಂದ ಸ್ನೇಹಿತರು ಮತ್ತು ನಾಯಕರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಇನ್ನು ನಾನು ಶೀಘ್ರದಲ್ಲೇ ನನ್ನ ಸಾರ್ವಜನಿಕ ಕರ್ತವ್ಯಗಳನ್ನು ಪುನರಾರಂಭಿಸುತ್ತೇನೆಂದು ಟ್ವೀಟ್ ಮಾಡಿಕೊಂಡಿದ್ದಾರೆ.

94ರ ಇಳಿವಯಸ್ಸಿನ ಅನಾರೋಗ್ಯದ ನಡುವೆಯೂ ದೇವೇಗೌಡರು ಪುಸ್ತಕ ಓದುತ್ತಿರುವ ಫೋಟೋ ಸಾಮಾಜಿಕ ಜಾಲತಾಣಗಳಲ್ಲಿ

ವೈರಲ್ ಆಗಿದ್ದು, ದೇವೇಗೌಡರ ಆರೋಗ್ಯ ಜನ ಕೊಂಡಾಡಿದ್ದಾರೆ. ರಾಗಿ ಮುದ್ದೆ ತಿಂದು ಬೆಳೆದ ದೇಹ ಈ ವಯಸ್ಸಿನಲ್ಲೂ ಕುಳಿತು ಪುಸ್ತಕ ಓದುತ್ತಾರೆ ಎಂದರೆ ಶ್ಲಾಘನೀಯ ಎಂದು ನೆಟ್ಟಿಗರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಇನ್ನು ಹದಿನೈದು ದಿನಗಳ ಕಾಲ ಸಂಪೂರ್ಣ ವಿಶ್ರಾಂತಿ ಪಡೆಯುವಂತೆ ಗೌಡರಿಗೆ ವೈದ್ಯರು ಸಲಹೆ ನೀಡಿದ್ದಾರೆ. ಹೀಗಾಗಿ ಅಭಿಮಾನಿಗಳು, ಕಾರ್ಯಕರ್ತರು ಮನೆಗೆ ಬರದೇ ಸಹಕರಿಸು ವಂತೆ ಪಕ್ಷದ ಮುಖಂಡರು ಮನವಿ ಮಾಡಿದ್ದಾರೆ.

ನಾಳೆ ಹಾಸನಾಂಬ ದರ್ಶನಕ್ಕೆ ಸಿಎಂ

• ಪ್ರಜೋದಯ ವರದಿ

ಹಾಸನ: ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ಅ.15 ರಂದು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಬುಧವಾರ ಬೆಳಿಗ್ಗೆ 11 ಗಂಟೆಗೆ ನಗರದ ಬೂವನಹಳ್ಳಿ ಹೆಲಿಪ್ಯಾಡ್‌ಗೆ ಆಗಮಿಸಿ, ನಂತರ ಹಾಸನಾಂಬ ದೇವಾಲಯಕ್ಕೆ ಭೇಟಿ ನೀಡಿ, ದೇವಿ ದರ್ಶನ ಪಡೆದು ಪೂಜೆ ಸಲ್ಲಿಸಲಿದ್ದಾರೆ. ಮಧ್ಯಾಹ್ನ 12 ಗಂಟೆಗೆ ಬೂವನಹಳ್ಳಿ ಹೆಲಿಪ್ಯಾಡ್‌ನಿಂದ ಮೈಸೂರಿಗೆ ತೆರಳಲಿದ್ದಾರೆ.

ಭವಾನಿ ರೇವಣ್ಣ ಸಲ್ಲಿಸಿದ್ದ ಅರ್ಜಿ ವಜಾ

• ಪ್ರಜೋದಯ ವರದಿ

ಬೆಂಗಳೂರು: ಕೆ.ಆರ್.ನಗರದ ಮಹಿಳೆಯ ಅಪಹರಣ ಪ್ರಕರಣದಿಂದ ಕೈಬಿಡುವಂತೆ ಕೋರಿ ಭವಾನಿ ರೇವಣ್ಣ ಅವರು ಸಲ್ಲಿಸಿದ್ದ ಅರ್ಜಿಯನ್ನು 42ನೇ ಎಸಿಜೆಎಂ ಕೋರ್ಟ್ ವಜಾಗೊಳಿಸಿದೆ.

ಕೆ.ಎ.ರಾಜಗೋಪಾಲ್ ಮತ್ತು ಭವಾನಿ ರೇವಣ್ಣ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿ ನ್ಯಾಯಮೂರ್ತಿ ಕೆ.ಎನ್.ಶಿವಕುಮಾರ್ ಆದೇಶಿಸಿದ್ದಾರೆ. ಆ ಮೂಲಕ ಪ್ರಕರಣದಲ್ಲಿ ಭವಾನಿ ರೇವಣ್ಣಗೆ ಮತ್ತೆ ಹಿನ್ನಡೆಯಾಗಿದೆ.

ವೈರಲ್ ಆಗಿದ್ದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋದಲ್ಲಿ ನನ್ನ ತಾಯಿಯ ಚಿತ್ರವೂ ಇದ್ದು, ಇದೀಗ ಅವರುಕಣ್ಮರೆಯಾಗಿದ್ದಾರೆಂದು ಮೈಸೂರು ಜಿಲ್ಲೆ ಕೆ.ಆರ್.ನಗರ ಠಾಣೆ ಯಲ್ಲಿ ಸಂತ್ರಸ್ತೆಯ ಪುತ್ರ ಪ್ರಕರಣ ದಾಖಲಿಸಿದ್ದರು. ಅವರ ದೂರಿನ ಆಧಾರದಲ್ಲಿ ಹೆಚ್.ಡಿ.ರೇವಣ್ಣ, ಭವಾನಿ ರೇವಣ್ಣ ಮತ್ತು ಸಂಬಂಧಿ ಬಾಬು ವಿರುದ್ಧ ದೂರು ದಾಖಲಾಗಿತ್ತು. ಜಾಮೀನು ಕೋರಿ ಭವಾನಿ ರೇವಣ್ಣ ಕರ್ನಾಟಕ ಹೈಕೋರ್ಟ್ ಮೆಟ್ಟಿಲೇರಿದ್ದರು. ಅಲ್ಲಿ ಅವರಿಗೆ ನಿರೀಕ್ಷಣಾ ಜಾಮೀನು ದೊರೆತಿತ್ತು.

ಆ ಬಳಿಕ ಪ್ರಕರಣ ಸುಪ್ರೀಂ ಕೋರ್ಟ್ ವರೆಗೂ ಹೋಗಿದ್ದು, ಭವಾನಿ ರೇವಣ್ಣಗೆ ನೀಡಿದ್ದ ಜಾಮೀನು ರದ್ದುಪಡಿಸುವಂತೆ ಆಗ್ರಹಿಸಲಾಗಿತ್ತು. ಆರೋಪಿ ಮಹಿಳೆ ಪ್ರಕರಣದಲ್ಲಿ ನೇರವಾಗಿ ಸಂಬಂಧ ಹೊಂದಿದ್ದಾರೆ. ಅತ್ಯಾಚಾರ ಎಸಗಿದ ಆರೋಪಿಯ ತಾಯಿ ಕೂಡ ಆಗಿದ್ದಾರೆ. ಆರೋಪಿಗಳು ಪ್ರತಿಷ್ಠಿತ ರಾಜಕೀಯ ಕುಟುಂಬಕ್ಕೆ ಸಂಬಂಧಿಸಿದವರು. ಹೀಗಾಗಿ ಹೈಕೋರ್ಟ್ ನೀಡಿರುವ ನೀರಿಕ್ಷಣಾ ಜಾಮೀನು ರದ್ದು ಮಾಡ ಬೇಕೆಂದು ಎಸ್‌ಐಟಿ ಪರ ವಕೀಲರು ವಾದ ಮಂಡಿಸಿದ್ದರು. ಆದರೆ ಜಾಮೀನನ್ನು ರದ್ದುಗೊಳಿಸಲಾ ಗದು ಎಂದು ಹೇಳಿದ್ದ ಸುಪ್ರೀಂಕೋರ್ಟ್, ರಾಜಕೀಯ ಕುಟುಂಬ ಎಂದು ಜಾಮೀನು ನಿರಾಕರಿಸಲು ಸಾಧ್ಯವಿಲ್ಲ, ಕೆಲ ರಾಜಕಾರಣಿಗಳು ಅಧಿಕಾರ ದುರ್ಬಳಕೆ ಮಾಡಿಕೊಳ್ಳಬಹುದು. ಈ ಪ್ರಕರಣದಲ್ಲಿ ತನಿಖೆ ದಾರಿ ತಪ್ಪಿದೆಯಾ? ತಪ್ಪಿದ್ದರೆ ನಾವು ನಿಮ್ಮ ನೆರವಿಗೆ ಬರಬಹುದು. ಇಲ್ಲಿ ಯಾವುದೂ ಆ ರೀತಿ ಕಾಣುತ್ತಿಲ್ಲ ಎಂದಿತ್ತು.

ದರ್ಶನಕ್ಕೆ ಭಕ್ತರ ದಂಡು: ಸರದಿ ಸಾಲುಗಳು ಭರ್ತಿ

ನಾಲ್ಕೂವರೆ ಲಕ್ಷಕ್ಕೂ ಅಧಿಕ ಜನರ ಆಗಮನ | ಹಾಸನಾಂಬ ಕಣ್ತುಂಬಿಕೊಂಡ ಭಕ್ತ ಸಮೂಹ

• ಪ್ರಜೋದಯ ವರದಿ

ಹಾಸನ: ಹಾಸನಾಂಬ ದೇವಿ ದರ್ಶನಕ್ಕೆ ಕಳೆದ ಮೂರು ದಿನಕ್ಕಿಂತ ಸೋಮವಾರ ಅಧಿಕ ಸಂಖ್ಯೆಯಲ್ಲಿ ಭಕ್ತರ ಆಗಮನವಾಗಿದ್ದರಿಂದ ಧರ್ಮ ದರ್ಶನ ಸಾಲಿನಲ್ಲಿ ಜನರು ನಾಲ್ಕು ಗಂಟೆಗೂ ಹೆಚ್ಚು ಕಾಲ ಕಾದು ದೇವಿ ದರ್ಶನ ಪಡೆಯಬೇಕಾಯಿತು.

ಶುಕ್ರವಾರ ಮುಂಜಾನೆ 5 ಗಂಟೆಯಿಂದ ಆರಂಭವಾದ ಈ ವರ್ಷದ ಹಾಸನಾಂಬ ದರ್ಶ ನೋತ್ಸವದಲ್ಲಿ ಸೋಮವಾರ ಮುಂಜಾನೆ 5 ಗಂಟೆವರೆಗೂ ಒಟ್ಟು 3.70 ಲಕ್ಷ ಜನರು ದರ್ಶನ ಪಡೆದುಕೊಂಡಿದ್ದಾರೆ. ಸೋಮವಾರ ರಾತ್ರಿ ಹೊತ್ತಿಗೆ ಒಟ್ಟು ದೇವಿಯ ದರ್ಶನ ಪಡೆದವರ ಭಕ್ತರ ಸಂಖ್ಯೆ 4.5 ಲಕ್ಷ ದಾಟಿದೆ.

4ನೇ ದಿನವಾದ ಸೋಮವಾರ ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಭವಾನಿ ರೇವಣ್ಣ, ಶಾಸಕ ಹೆಚ್.ಪಿ. ಸ್ವರೂಪ್, ಮೇಯರ್ ಗಿರೀಶ್ ಚನ್ನವೀರಪ್ಪ, ಶಾಸಕ ರಮೇಶ್ ಬಾಬು ಬಂಡಿ ಸಿದ್ದೇಗೌಡ, ಮಾಜಿ ಶಾಸಕ ವೈ.ಎಸ್.ವಿ.ದತ್ತ, ಚಿತ್ರನಟಿ ತಾರಾ ಅನುರಾಧ ಸೇರಿ ಹಲವು ಗಣ್ಯರು ತಮ್ಮ ಕುಟುಂಬದೊಂದಿಗೆ ಆಗಮಿಸಿ ದೇವಿಯ ದರ್ಶನ ಪಡೆದರು. ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ತಮ್ಮ ಪತಿಯೊಂದಿಗೆ ಭಕ್ತರ ಸಾಲಿನಲ್ಲೇ

» ನಾಲ್ಕನೇ ಪುಟದಲ್ಲಿ

ದೇಗುಲದೊಳಗೆ ನೂಕಾಟ, ಗದ್ದಲ

ಗಂಟೆಗಟ್ಟಲೇ ಸಾಲಿನಲ್ಲಿ ನಿಂತು ಬಂದರೂ ಗರ್ಭಗುಡಿಯೊಳ ಗಿರುವ ದೇವರನ್ನು ಕೇವಲ 2 ಸೆಕೆಂಡ್ ಕೂಡ ನೋಡಲು ಬಿಡುವುದಿಲ್ಲ. ಪೊಲೀಸರ ಕೂಗಾಟ, ಎಳೆದಾಟದಿಂದ ಸರಿಯಾಗಿ ದೇವಿ ದರ್ಶನ ಪಡೆದು ಕೊಳ್ಳಲು ಆಗುತ್ತಿಲ್ಲ. ದೇಗುಲದೊಳಗೆ ನೂಕುನುಗ್ಗಲು ಉಂಟಾಗುತ್ತಿದೆ ಎಂದು ಭಕ್ತರು ಅಸಮಾ ಧಾನ ವ್ಯಕ್ತಪಡಿಸಿದ್ದಾರೆ. ದೇವಿಯ ದರ್ಶನದ ವೇಳೆ ಪೊಲೀಸರು, ಅಧಿಕಾರಿಗಳು, ಸ್ಕೌಟ್ ಆ್ಯಂಡ್ ಗೈಡ್ಸ್, ಎನ್‌ಸಿಸಿ ವಿದ್ಯಾರ್ಥಿಗಳ ಗದ್ದಲವೇ ಹೆಚ್ಚಾಗಿರುತ್ತದೆ. ಅದರಿಂದ ಮಹಿಳೆಯರು, ಮಕ್ಕಳ ದರ್ಶನಕ್ಕೆ ತೊಂದರೆ ಅನುಭವಿಸುವಂತಾಗಿದೆ.

ಹಾಸನಾಂಬ ದರ್ಶನ ಪಡೆದ ರೇವಣ್ಣ ದಂಪತಿ

ಟಿಕೆಟ್ ಪಡೆದು ಆಗಮನ | ಕಾರು ಒಳಬಿಡದಿದ್ದಕ್ಕೆ ಅಧಿಕಾರಿಗಳ ವಿರುದ್ಧ ಅಸಮಾಧಾನ

• ಪ್ರಜೋದಯ ವರದಿ

ಹಾಸನ: ಮಾಜಿ ಸಚಿವ ಹೆಚ್.ಡಿ. ರೇವಣ್ಣ, ಪತ್ನಿ ಭವಾನಿ ರೇವಣ್ಣ ಅವರು ಸೋಮವಾರ 1 ಸಾವಿರ ರೂ. ಟಿಕೆಟ್ ಪಡೆದು ಹಾಸನಾಂಬ ದೇವಿ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದರು.

ಮಾಜಿ ಪ್ರಧಾನಿ ಕುಟುಂಬದ ಹಿನ್ನಲೆ ವಿಶೇಷ ಭದ್ರತೆ ಹೊಂದಿರುವ ರೇವಣ್ಣ ಅವರು ತಮ್ಮದೇ ಕಾರಿನಲ್ಲಿ ತಮ್ಮದೇ ಭದ್ರತಾ ವ್ಯವಸ್ಥೆಯೊಂದಿಗೆ ದೇವಿ ದರ್ಶನಕ್ಕೆ ಆಗಮಿಸಿದ್ದರು. ಈ ವೇಳೆ ಅವರ ಕಾರನ್ನು ತಡೆದ ಕಂದಾಯ ಇಲಾಖೆ ಅಧಿಕಾರಿಗಳ ವಿರುದ್ಧ ರೇವಣ್ಣ ಅಸಮಾಧಾನ ವ್ಯಕ್ತಪಡಿಸಿದ ಅವರು, ಪತ್ನಿ ಭವಾನಿ ರೇವಣ್ಣ ಜೊತೆ ಸಾವಿರ ರೂ. ಟಿಕೆಟ್ ಪಡೆದು ಮಹಾನಗರ ಪಾಲಿಕೆ ಮುಂಭಾಗದ ಪ್ರವೇಶ ದ್ವಾರದಿಂದ ದೇಗುಲದವರೆಗೂ ನಡೆದುಕೊಂಡೆ ದೇಗುಲಕ್ಕೆ ಆಗಮಿಸಿದರು.

ಬಳಿಕ ಅರ್ಧ ಗಂಟೆಗೂ ಹೆಚ್ಚು ಕಾಲ ವಿಶೇಷ ಪೂಜೆ ಸಲ್ಲಿಸಿದರು. ಹೆಚ್.ಡಿ.ದೇವೇಗೌಡರು, ಚೆನ್ನಮ್ಮ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಅನಿತಾ ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ, ಸೂರಜ್ ರೇವಣ್ಣ, ಪ್ರಜ್ವಲ್ ರೇವಣ್ಣ ಸೇರಿ ಕುಟುಂಬ ಸದಸ್ಯರ ಹೆಸರಿನಲ್ಲಿ ಅರ್ಚನೆ ಮಾಡಿಸಿದರು.

ಬ್ರಾಹ್ಮಿ, ಕೌಮಾರಿ, ಮಹೇಶ್ವರಿ ಮೂರು ದೇವರ ಮೇಲಿದ್ದ ಕುಂಕುಮ ಕೇಳಿ ಪಡೆದ ರೇವಣ್ಣ ಅವರು, ದೇವರ ಮೇಲಿದ್ದ ಹೂವು ಕೊಂಡೊಯ್ದರು. ಈ ವೇಳೆ ರೇವಣ್ಣ ದಂಪತಿಗೆ ಮಹಾ ನಗರ ಪಾಲಿಕೆ ಮೇಯರ್



ಗಿರೀಶ್ ಚನ್ನವೀರಪ್ಪ ಅವರು ಜೊತೆಗಿದ್ದರು.

ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ ಹೆಚ್.ಡಿ. ರೇವಣ್ಣ ಅವರು, ನಾನು 1 ಸಾವಿರ ರೂ. ಮೊತ್ತದ 5 ಟಿಕೆಟ್ ಖರೀದಿಸಿ ಬಂದು ದೇವಿಯ ದರ್ಶನಕ್ಕೆ ಆಗಮಿಸಿದ್ದೇನೆ. ಜಿಲ್ಲೆ ಮತ್ತು ರಾಜ್ಯದ ಜನತೆಗೆ ಒಳಿತಾಗಲಿ. ಒಳ್ಳೆಯ ಮಳೆ, ಬೆಳೆ ಆಗಿ ಜನರು

» ನಾಲ್ಕನೇ ಪುಟದಲ್ಲಿ

ಡಿಸಿಗೂ ತಳ್ಳಾಟದ ಅನುಭವ: 1 ಸೆಕೆಂಡ್ ಮಾತ್ರ ದೇವಿ ನೋಡಲು ಅವಕಾಶ

ಸಾಮಾನ್ಯ ಭಕ್ತರಂತೆ ಧರ್ಮ ದರ್ಶನ ಪಡೆದ ಡಿ.ಸಿ.

• ಪ್ರಜೋದಯ ವರದಿ

ಹಾಸನ: ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ತಮ್ಮ ಪತಿಯೊಂದಿಗೆ ಧರ್ಮ ದರ್ಶನದ ಸರದಿ ಸಾಲಿನಲ್ಲಿ ಸಾಗಿ ಹಾಸನಾಂಬ ದೇವಿ ದರ್ಶನ ಪಡೆಯುವ ಮೂಲಕ ಸಾಮಾನ್ಯ ಭಕ್ತರು ಎದುರಿಸು ತ್ತಿರುವ ಸಮಸ್ಯೆಗಳನ್ನು ಅರಿತು ಸರಿಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಧರ್ಮ ದರ್ಶನ ಸಾಲಿನಲ್ಲಿ ಸಾಗುತ್ತಿದ್ದ ವೇಳೆ ಕೆಲವು ಕಡೆಗಳಲ್ಲಿ ಕಬ್ಬಿಣದ ರಾಡುಗಳು ಕಾಲಿಗೆ ತಗಲುತ್ತಿದುದನ್ನು ಗಮನಿಸಿ ಅವುಗಳಿಗೆ ಬಟ್ಟೆ ಕಟ್ಟಿ ಸರಿಪಡಿಸಲು ಸೂಚಿಸಿರಲ್ಲದೆ, ಸ್ಥಳದಲ್ಲಿಯೇ ಸರಿಪಡಿಸಿದರು. ಸಾರ್ವಜನಿಕರು ತಿಂಡಿ-ತಿನಿಸುಗಳನ್ನು ತಿಂದು ಅಲ್ಲಲ್ಲಿಯೇ ಹಾಕಿದ್ದ ಖಾಲಿ ಪ್ಲಾಸ್ಟಿಕ್ ಕವರ್‌ಗಳು, ಕುಡಿಯುವ ನೀರಿನ ಬಾಟಲ್ ಮತ್ತು ಹಣ್ಣಿನ ಸಿಪ್ಪೆಯನ್ನು ಸ್ವಚ್ಛಗೊಳಿಸಲು ಅಧಿಕಾರಿಗಳಿಗೆ ತಿಳಿಸಿದರು.

ಸರದಿ ಸಾಲಿನಲ್ಲಿ ಸಾಗುತ್ತಿದ್ದ ಭಕ್ತರನ್ನು ಮಾತನಾಡಿಸಿದ ಜಿಲ್ಲಾಧಿಕಾರಿ, ಹಾಸನಾಂಬ ದರ್ಶನೋತ್ಸವದ ವ್ಯವಸ್ಥೆಯ ಅಭಿಪ್ರಾಯಗಳನ್ನು ಆಲಿಸಿದರು. ಈ ವೇಳೆ ದರ್ಶನಕ್ಕೆ ವ್ಯವಸ್ಥೆ ತುಂಬಾ ಅಚ್ಚುಕಟ್ಟಾಗಿ ಮಾಡಲಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ ಜನರು, ಸೆಲ್ಫಿ ತೆಗೆದುಕೊಳ್ಳಲು ಜಿಲ್ಲಾಧಿಕಾರಿಯೊಂದಿಗೆ ದರ್ಶನ ಪಡೆದು ಖುಷಿಪಟ್ಟರು.

ದರ್ಶನದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಳಿಗ್ಗೆ 10.30ಕ್ಕೆ ಕುಟುಂಬ ಸಮೇತರಾಗಿ, ವಿವಿಧ ಹಿರಿಯ ಅಧಿಕಾರಿಗಳ ಜೊತೆಗೆ ಧರ್ಮ ದರ್ಶನವನ್ನು ಆರಂಭಿಸಿ 1.50ಕ್ಕೆ ದೇವಿ ದರ್ಶನ

ಪಡೆದುಕೊಂಡೆವು. ಈ ಸಂದರ್ಭದಲ್ಲಿ ಮುಖ್ಯವಾಗಿ ಕಂಡು ಬಂದಂತಹ ನ್ಯೂನ್ಯತೆ

ರಾಜ್ಯಕ್ಕೆ 40 ಕೋಟಿ ರು. ಪಟಾಕಿ ಆದಾಯ ಠುಸ್

ಪಟಾಕಿ ಅಕ್ರಮ ಮಾರಾಟ; ತಮಿಳುನಾಡಿಗೆ ತೆರಿಗೆ, ರಾಜ್ಯಕ್ಕೆ ಬರೀ ಮದ್ದಿನ ಹೊಗೆ

ದೀಪಾವಳಿ ಬರುವ ಮುನ್ನವೇ ರಾಜ್ಯದಲ್ಲಿ ಸದ್ದಿಲ್ಲದೆ ತಮಿಳುನಾಡು ಪಟಾಕಿ ಅಕ್ರಮ ಮಾರಾಟ ದಂಧೆ ಶುರುವಾಗಿದೆ. ಅಷ್ಟೇ ಅಲ್ಲ, ಅಕ್ರಮ ಮಾರಾಟದ ಮೇಲೆ ಸರಕಾರ ಬೆಳಕು ಚೆಲ್ಲದ ಕಾರಣ ಪಟಾಕಿ ಹೊಗೆಯಲ್ಲಿ ರಾಜ್ಯಸರಕಾರ ಸುಮಾರು 40 ಕೋಟಿ ರು.ಗಳಿಗೂ ಹೆಚ್ಚು ತೆರಿಗೆ ಆದಾಯ ಕಳೆದುಕೊಳ್ಳುತ್ತಿದೆ. ಇದರಿಂದ ಮುಂಬರುವ ದೀಪಾವಳಿ ಹೆಸರಿನಲ್ಲಿ ನಡೆಯುವ ಕೇವಲ ಐದು ದಿನಗಳ ವ್ಯವಹಾರಗಳಲ್ಲಿ ನೆರೆ ರಾಜ್ಯ ತಮಿಳುನಾಡು ಬೊಕ್ಕಸ ತುಂಬಿಸಿಕೊಂಡರೆ ರಾಜ್ಯಕ್ಕೆ ಮಾತ್ರ ಬರೀ ಪಟಾಕಿ ಹೊಗೆ ಹಾಗೂ ಪಟಾಕಿ ಸಿಡಿತದ ಕಸ ಮಾತ್ರ ಲಭ್ಯವಾಗುವ ಸಾಧ್ಯತೆ ಇದೆ.

ದೀಪಾವಳಿ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಕೇವಲ ಐದು ದಿನಗಳಿಗೆ ಮಾತ್ರ ಪಟಾಕಿ ಮಾರಾಟ ಮಾಡಲು ಅವಕಾಶ ನೀಡಲಾಗಿದ್ದು, ವಾರ್ಷಿಕ ಅವಧಿಗೆ ಪಟಾಕಿ ದಾಸ್ತಾನು ಮಾಡುವುದನ್ನು ಕೇವಲ ಏಳೆಂಟು ಬೆರಳೆಣಿಕೆ ಸಂಸ್ಥೆಗಳಿಗೆ ಮಾತ್ರ ಅನುಮತಿ ನೀಡಲಾಗಿದೆ. ಹಬ್ಬದ ಕಾರಣಕ್ಕೆ ಈ ಐದು ದಿನಗಳಿಗೆ ರಾಜ್ಯಾದ್ಯಂತ ಸುಮಾರು 1000 ಮಂದಿಗೆ ಮಾತ್ರ ಮಾರಾಟದ ಅವಕಾಶ ಸಿಕ್ಕಿದೆ. ಆದರೆ ದೀಪಾವಳಿಗೂ ಮುನ್ನವೇ ರಾಜ್ಯಕ್ಕೆ ತಮಿಳುನಾಡು ಪಟಾಕಿಗಳ ಅಕ್ರಮ ಸಾಗಣೆಯಾಗಿದ್ದು ಇದರಿಂದ ಬೆಂಗಳೂರು ಸೇರಿದಂತೆ ಭಾರೀ ಸಿಡಿಮದ್ದಿನ ಪಟಾಕಿಗಳ ಅಕ್ರಮ ದಾಸ್ತಾನು ಮತ್ತು ಮಾರಾಟ ಹೆಚ್ಚಾಗಿದೆ.

ಈ ಅಕ್ರಮ ದಾಸ್ತಾನು ಮತ್ತು ಅನಧಿಕೃತ ಮಾರಾಟದಿಂದ ಪಟಾಕಿ ಸಂಬಂಧ ದುರಂತಗಳು ನಡೆಯಬಹುದಾದ ಆತಂಕಗಳಿದ್ದು, ಸಂಬಂಧಿಸಿದ ಇಲಾಖೆಗಳು ಮೌನವಾಗಿವೆ ಎಂದು ಅಧಿಕೃತ ಮಾರಾಟಗಾರರು ಹೇಳುತ್ತಿದ್ದಾರೆ.

2023ರ ಅಕ್ಟೋಬರ್ 7ರಂದು ಬೆಂಗಳೂರಿನ ಅತ್ತಿಬೆಲೆಯ ಪಟಾಕಿ ಗೋದಾಮಿನಲ್ಲಿ ಪಟಾಕಿ ಸ್ಫೋಟ ದುರಂತಕ್ಕೆ 14 ಮಂದಿ ಬಲಿಯಾಗಿದ್ದರು. ನಾಲ್ವರು ಗಾಯಗೊಂಡಿದ್ದರು. ಈಗಾಗಲೇ ತಮಿಳುನಾಡಿನಿಂದ ಸುಮಾರು 220 ಕೋಟಿ ರು. ಮೊತ್ತದ ವಿವಿಧ ಪಟಾಕಿಗಳು ತಿಂಗಳ ಹಿಂದೆಯೇ ಕರ್ನಾಟಕ ಪ್ರವೇಶಿಸಿದ್ದು ಇದರಲ್ಲಿ ಎಷ್ಟು ಅಧಿಕೃತ ಮತ್ತು ಕಾನೂನು ಬದ್ಧ ಪಟಾಕಿ ಸಾಗಣೆ, ದಾಸ್ತಾನು ಮತ್ತು ಮಾರಾಟದ ಕ್ರಮಗಳನ್ನು ಗಂಭೀರವಾಗಿ ಪರಿಶೀಲಿಸಿದ್ದಾರೆಯೇ ಎಂದು ನೋಡಿದರೆ ಅದೂ ಕಾಣುತ್ತಿಲ್ಲ ಎಂದು ಮಾರಾಟಗಾರರು ಹೇಳಿದ್ದಾರೆ.

ಪ್ರತಿವರ್ಷ ದೀಪಾವಳಿ ಕಾಲಕ್ಕೆ ರಾಜ್ಯದಲ್ಲಿ ಸುಮಾರು 240 ಕೋಟಿ ರು. ಪಟಾಕಿ ವಹಿವಾಟು ನಡೆಯುತ್ತದೆ. ಬೆಂಗಳೂರು ಒಂದರ ಸುಮಾರು 150 ಕೋಟಿ ರು. ಪಟಾಕಿ ವಹಿವಾಟು ನಡೆಯುತ್ತದೆ. ಇಷ್ಟೂ ಪಟಾಕಿ ನೆರೆಯ ತಮಿಳುನಾಡಿನ ಶಿವಕಾಶಿ ಪ್ರದೇಶದಿಂದ ಪೂರೈಕೆಯಾಗುತ್ತಿದ್ದು, ಇಲ್ಲಿಂದಲೇ ಇಡೀ ದೇಶಕ್ಕೆ (ಹೆಚ್ಚಾಗಿ ಉತ್ತರ ಭಾರತಕ್ಕೆ) ಪೂರೈಕೆಯಾಗುತ್ತದೆ. ರಾಜ್ಯಕ್ಕೆ ಬೆಂಗಳೂರಿನ ಅತ್ತಿಬೆಲೆ ಸುತ್ತಮುತ್ತಲ ತಮಿಳುನಾಡು ಗಡಿ ಹಾಗೂ ಸರ್ಜಾಪುರದ ತಮಿಳುನಾಡು ಗಡಿಯ ಆಸುಪಾಸಿನಲ್ಲಿ ಸುಮಾರು 250ಕ್ಕೂ ಹೆಚ್ಚು ಪಟಾಕಿ ದಾಸ್ತಾನು ಮತ್ತು ಮಾರಾಟ ಮಳಿಗೆಗಳಿವೆ. ಇಲ್ಲಿಂದ ಬೆಂಗಳೂರಿಗೆ ಹಾಗೆಯೇ ರಾಜ್ಯದ ಇತರ ಜಿಲ್ಲೆಗಳಿಗೆ ಮಾರಾಟವಾಗುತ್ತಿದೆ.

ಈಗಾಗಲೇ ತಮಿಳುನಾಡಿನಿಂದ ಪಟಾಕಿ ಬಂದು ದಾಸ್ತಾನಾಗಿದೆ. ಮಾರಾಟವೂ ಆಗಿದೆ. ಅನೇಕ ಕಡೆ ಅನುಮತಿ ಪಡೆಯದವರೂ ಇದರಲ್ಲಿ ಇದ್ದಾರೆ. ಇವರು ಸರಕಾರ ಅನುಮತಿ ನೀಡಿರುವ ಅವಧಿ (ಅ.18ರಿಂದ 22)ಗೂ ಮುನ್ನವೇ ದಾಸ್ತಾನು ಮತ್ತು ಮಾರಾಟ ಮಾಡಲಾರಂಭಿಸಿದ್ದಾರೆ.

ವಿಚಿತ್ರವೆಂದರೆ, ಇಲ್ಲಿ ಖರೀದಿಸುವ ಪಟಾಕಿಗಳಿಗೆ ಬಿಲ್ ಸಿಗುವುದಿಲ್ಲ. ಅದು ಸಿಕ್ಕರೂ ನಕಲಿ ಬಿಲ್‌ಗಳ ಹಾವಳಿ. ಇನ್ನು ಬಿಲ್‌ಗಳಲ್ಲಿ ಎನ್ನುವುದನ್ನು ವಾಣಿಜ್ಯ ತೆರಿಗೆ ಇಲಾಖೆ ನಿಗಾ ವಹಿಸಿ ಪತ್ತೆ ಮಾಡಬೇಕಿತ್ತು.

ಹಾಗೆಯೇ ಪಟಾಕಿಗಳ ದಾಸ್ತಾನು ಮಾಡಲು ಅನುಮತಿ ನೀಡುವ ಕಂದಾಯ ಇಲಾಖೆ ಪೂರೈಕೆ ಮತ್ತು ದಾಸ್ತಾನು ಬಗ್ಗೆ ಕ್ರಮ ವಹಿಸಬೇಕಿತ್ತು. ಇನ್ನು ಪಟಾಕಿಗಳ ಅಕ್ರಮ ಸಾಗಣೆ ಮತ್ತು ಅಕ್ರಮ ಮಾರಾಟದ ಬಗ್ಗೆ ಪೊಲೀಸ್ ಇಲಾಖೆ ಎಚ್ಚರ ವಹಿಸಬೇಕಿತ್ತು. ಆದರೆ ಈ ಇಲಾಖೆಗಳು ಅಲ್ಲಲ್ಲಿ ಕಾಣಸಿಗುವ ಕೆಲವು ಸಣ್ಣಪುಟ್ಟ ಮಾರಾಟಗಾರರ ವಿರುದ್ಧ ಕ್ರಮಕೈಗೊಂಡಿರುವುದನ್ನು ಬಿಟ್ಟರೆ ಭಾರೀ ದಾಸ್ತಾನುಗಳ ಬಗ್ಗೆ ಗಮನ ನೀಡಿರುವಂತೆ ಕಾಣುತ್ತಿಲ್ಲ.

ಹೀಗಾಗಿ ಪಟಾಕಿ ಅಕ್ರಮಗಳು ಹೆಚ್ಚಾಗಿವೆ. ಈಗಲಾದರೂ ಸಂಬಂಧಿಸಿದ ಇಲಾಖೆಗಳು ಯಾವುದೆಲ್ಲ ಪಟಾಕಿಗಳಿವೆ ಎಂದ ನಮೂದು ಮಾಡಿರುವುದಿಲ್ಲ. ಬದಲಾಗಿ ಮಿಶ್ರ ಪಟಾಕಿ ಎಂಬ ಬಾಕ್ಸ್‌ಗಳ ಹೆಸರಿನಲ್ಲಿ ಮಾರಾಟವಾಗುತ್ತದೆ. ಹೀಗಾಗಿ ಪಟಾಕಿ ಅಕ್ರಮ ಮಾರಾಟ ಮತ್ತು ಸಾಗಣೆ ಹೆಚ್ಚಾಗಿವೆ ಎಂದು ಸ್ಥಳೀಯ ವ್ಯಾಪಾರಿಗಳು ಹೇಳಿದ್ದಾರೆ.

ತಮಿಳುನಾಡಿಗೆ ಜಿಎಸ್‌ಟಿ ಸಂದಾಯ

ಕೋಟ್ಯಂತರ ರುಪಾಯಿಗಳ ಪಟಾಕಿ ರಾಜ್ಯದ ಮಾರಾಟವಾದರೂ ರಾಜ್ಯಕ್ಕೆ ಅದರ ತೆರಿಗೆ ಹಣ ಸಿಗುವುದಿಲ್ಲ. ಅಂದರೆ ಇಲ್ಲಿ ಜಿಎಸ್‌ಟಿ ನಿಯಮದ ಪ್ರಕಾರ ಪಟಾಕಿ ಬಳಕೆದಾರರು ತೆರಿಗೆ ಪಾವತಿಸುತ್ತಾರೆ. ಅಂದರೆ ಇಲ್ಲಿ ತಮಿಳುನಾಡಿನ (ಜಿಎಸ್‌ಟಿ ಬಿಲ್ ರಹಿತ) ಪಟಾಕಿ ಕರ್ನಾಟಕದಲ್ಲಿ ಮಾರಾಟವಾಗುತ್ತಿರುವುದರಿಂದ ತೆರಿಗೆ ತಮಿಳುನಾಡಿಗೆ ಸೇರುತ್ತಿದೆ. ಒಂದೊಮ್ಮೆ ವ್ಯಾಪಾರ ಜಿಎಸ್‌ಟಿ ಬಿಲ್ ಸಹಿತ ನಡೆದರೆ ತಮಿಳುನಾಡು ಪಡೆದಿದ್ದ ಜಿಎಸ್‌ಟಿಯನ್ನು (ಇಂಟಿಗ್ರೇಟೆಡ್) ಸಂಗ್ರಹಿಸಿ ಕರ್ನಾಟಕಕ್ಕೆ ನೀಡಬೇಕಾಗುತ್ತದೆ. ಆದರೆ ಇಲ್ಲಿ ತಮಿಳುನಾಡಿನ ಪಟಾಕಿ ವ್ಯಾಪಾರಿಗಳು ರಾಜ್ಯದವರಿಂದ ಜಿಎಸ್‌ಟಿ ಹಣ ಪಡೆಯುತ್ತಾರೆಯೋ ವಿನಾ ಅದನ್ನು ಬಿಲ್‌ನಲ್ಲಿ ತೋರಿಸುತ್ತಿಲ್ಲ.

ಹೀಗಾಗಿ ರಾಜ್ಯಕ್ಕೆ ಸೇರಬೇಕಿದ್ದ ತೆರಿಗೆ ತಮಿಳುನಾಡಿಗೆ ಹರಿದು ಹೋಗುತ್ತಿದೆ. ಹೀಗಾಗಿ ಕೇವಲ ಈ ಐದು ದಿನಗಳ 240 ಕೋಟಿ ರು.ಗಳ ಪಟಾಕಿ ವಹಿವಾಟಿನಲ್ಲಿ ರಾಜ್ಯಕ್ಕೆ ಸುಮಾರು 40 ಕೋಟಿ ರು.ಗಳಿಗೂ ಹೆಚ್ಚು ಆದಾಯ ಸೋರಿಕೆಯಾದಂತಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

– ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

> ದೀಪಾವಳಿ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಕೇವಲ ಐದು ದಿನಗಳಿಗೆ ಮಾತ್ರ ಪಟಾಕಿ ಮಾರಾಟ ಮಾಡಲು ಅವಕಾಶ ನೀಡಲಾಗಿದ್ದು, ವಾರ್ಷಿಕ ಅವಧಿಗೆ ಪಟಾಕಿ ದಾಸ್ತಾನು ಮಾಡುವುದನ್ನು ಕೇವಲ ಏಳೆಂಟು ಬೆರಳೆಣಿಕೆ ಸಂಸ್ಥೆಗಳಿಗೆ ಮಾತ್ರ ಅನುಮತಿ ನೀಡಲಾಗಿದೆ. ಹಬ್ಬದ ಕಾರಣಕ್ಕೆ ಈ ಐದು ದಿನಗಳಿಗೆ ರಾಜ್ಯಾದ್ಯಂತ ಸುಮಾರು 1000 ಮಂದಿಗೆ ಮಾತ್ರ ಮಾರಾಟದ ಅವಕಾಶ ಸಿಕ್ಕಿದೆ.

> ಪಟಾಕಿ ಮಾರಾಟದಲ್ಲಿ ತೆರಿಗೆ ವಂಚನೆಯಾಗುತ್ತಿರುವ ಬಗ್ಗೆ ಮಾಹಿತಿ ಪಡೆದು ಅಗತ್ಯ ಕ್ರಮ ಕೈಗೊಳ್ಳುತ್ತೇವೆ. ದಾಖಲೆಗಳನ್ನು ಪರಿಶೀಲಿಸಿ ಅಕ್ರಮಗಳನ್ನು ತಡೆಯಲು ಅಧಿಕಾರಿಗಳಿಗೆ ಸೂಚನೆ ನೀಡುತ್ತೇವೆ.
> – ವಿಪುಲ್ ಬನ್ಸಾಲ್, ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತ

ಸರ್ವೇ ಜನಾಃ ಸುಖಿನೋ ಭವಂತು, ಸಮಸ್ತ ಸನ್ಮಂಗಳಾನಿ ಭವಂತು

- ನಮ್ಮ ಆಂತರಿಕ ಕಲಹವು ನೂರು ಜನರಿಗೆ ನೂರು ರೀತಿಯ ಪ್ರೇರಣೆಯನ್ನು ನೀಡುತ್ತದೆ. ಇದನ್ನೇ ಹಿರಿಯರು ಮತ್ತೊಂದು ರೀತಿಯಲ್ಲಿ ಹೇಳಿದ್ದಾರೆ– ಬಾವಿಯನ್ನು ತೋಡಬೇಕು ಎಂದರೆ, ನೂರು ಕಡೆ ಹಳ್ಳಗಳನ್ನು ಇಷ್ಟಿಷ್ಟೇ ಆಳಕ್ಕೆ ತೋಡಿ ಬಿಟ್ಟುಬಿಡುವುದಲ್ಲ, ಬದಲಿಗೆ ಒಂದೇ ಜಾಗದಲ್ಲಿ 100 ಅಡಿಯನ್ನು ತೋಡುವುದು ಅಂತ. ಆಗ ಶ್ರಮವೂ ಕಡಿಮೆಯಾಗುತ್ತದೆ ಮತ್ತು ಪ್ರಯೋಜನವೂ ದಕ್ಕುತ್ತದೆ.
- ಸರ್ವೇ ಜನಾಃ ಸುಖಿನೋ ಭವಂತು, ಸಮಸ್ತ ಸನ್ಮಂಗಳಾನಿ ಭವಂತು

ಹಾಸ್ಟೆಲ್ ಒಂದರಲ್ಲಿ ಪ್ರತಿದಿನವೂ ಚಿತ್ರಾನ್ನವನ್ನೇ ತಿಂದು ತಿಂದು ಬೇಜಾರಾದ 80 ವಿದ್ಯಾರ್ಥಿಗಳು, ಒಂದೊಂದು ದಿನವೂ ಬೇರೆ ಬೇರೆ ತರಹದ ತಿಂಡಿಯನ್ನು ಮಾಡುವಂತೆ ಹಾಸ್ಟೆಲ್‌ನ ವಾರ್ಡನ್‌ಗೆ ಕೋರಿದರು. ಆದರೆ ಮಿಕ್ಕ 20 ಜನರಿಗೆ ಪ್ರತಿದಿನವೂ ಚಿತ್ರಾನ್ನವೇ ಬೇಕಿತ್ತು. ಆಗ ವಾರ್ಡನ್, ಈಗೊಂದು ಕೆಲಸ ಮಾಡೋಣ. ವೋಟಿಂಗ್ ನಡೆಸಿ, ಯಾರ ಪರವಾಗಿ ಹೆಚ್ಚು ವೋಟ್ ಬರುತ್ತದೋ, ಅದರಂತೆ ಮುಂದುವರಿಯೋಣ ಎಂದು ಹೇಳಿದರು.

ಚಿತ್ರಾನ್ನ ಇಷ್ಟವಿದ್ದ 20 ವಿದ್ಯಾರ್ಥಿಗಳು ಚಿತ್ರಾನ್ನಕ್ಕೇ ವೋಟ್ ಹಾಕಿದರು, ಆದರೆ ಉಳಿದ 80 ಮಂದಿ ವಿದ್ಯಾರ್ಥಿಗಳು ಈ ಕುರಿತು ಗಂಭೀರವಾಗಿ ಆಲೋಚಿಸಿ ಒಂದು ಸ್ಪಷ್ಟ ನಿರ್ಧಾರಕ್ಕೆ ಬರದೆ, ತಮಗಿಷ್ಟವಾದ ಉಪಾಹಾರಗಳ ಬಗ್ಗೆ ಉಲ್ಲೇಖಿಸತೊಡಗಿದರು. ಅದು ಕೊನೆಗೆ ಜಗಳಕ್ಕೇ ತಿರುಗಿ ಬಿಟ್ಟಿತು. ಆ 80 ಮಂದಿ ತಮ್ಮ ಬುದ್ಧಿಗೆ, ವಿವೇಚನೆಗೆ ಕೆಲಸ ಕೊಡಲೇ ಇಲ್ಲ; ಬದಲಿಗೆ ತಮಗಿಷ್ಟವಾಗಿರೋ ಉಪಾಹಾರಗಳಿಗೆ ವೋಟ್ ಮಾಡಲು ಶುರುಮಾಡಿದರು.

ಈ ರೀತಿಯಾಗಿ, ಅವರಲ್ಲಿ 18 ಮಂದಿ ದೋಸೆಗೆ, 16 ಮಂದಿ ಪರೋಟಾಕ್ಕೆ, 14 ಮಂದಿ ರೊಟ್ಟಿಗೆ, 12 ಮಂದಿ ಬ್ರೆಡ್–ಬಟರ್‌ಗೆ, 10 ಮಂದಿ ನೂಡಲ್ಸ್‌ಗೆ, 10 ಮಂದಿ ಇಡ್ಲಿಗೆ ವೋಟ್ ಮಾಡಿದರು! ಈಗ ಯೋಚನೆ ಮಾಡಿ ಅಲ್ಲಿ ಏನಾಗಿರಬಹುದು ಅಂತ! ಆ ಹಾಸ್ಟೆಲ್‌ನ ಮೆಸ್‌ನಲ್ಲಿ ಈಗಲೂ ಆ 80 ವಿದ್ಯಾರ್ಥಿಗಳಿಗೆ ಚಿತ್ರಾನ್ನವೇ ಗತಿಯಾಗಿದೆ.

ಯಾಕೆಂದರೆ, ಉಳಿದ ಆ 20 ವಿದ್ಯಾರ್ಥಿಗಳು ಒಗ್ಗಟ್ಟಾಗಿದ್ದರು. ಎಲ್ಲಿಯವರೆಗೆ ಆ 80 ಮಂದಿ ದಿಕ್ಕಾಪಾಲಾಗಿದ್ದರೋ, ಅಲ್ಲಿಯವರೆಗೂ ಮಂದಿಯ ಆಟ ನಡೆಯುತ್ತಲೇ ಇತ್ತು. ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಕೂಡ ಇಂಥ ಅನೇಕ ವಿಷಯಗಳಿಗೆ ನಾವು ತಲೆ ಕೆಡಿಸಿಕೊಂಡು, ಅನಗತ್ಯವಾಗಿ ಕಡೆಗಣಿಸಲ್ಪಡುತ್ತೇವೆ. ನಮ್ಮಲ್ಲಿ ಎಲ್ಲಿಯವರೆಗೂ ಭೇದಭಾವಗಳಿದ್ದರೆ, ಅಭಿವೃದ್ಧಿಯನ್ನು ನಾವು ಹೊಂದಲು ಎಂದಿಗೂ ಸಾಧ್ಯವಿಲ್ಲ. ಎದುರಿಗಿರುವವರು ಕೂಡ ನಮ್ಮ ದ್ವೇಷವನ್ನು, ಭಿನ್ನಾಭಿಪ್ರಾಯವನ್ನು ಉಪಯೋಗಿಸಿಕೊಳ್ಳುತ್ತಾರೆ, ತಮಗಷ್ಟೇ ಲಾಭ ಮಾಡಿಕೊಳ್ಳುತ್ತಾರೆ.

ನಮ್ಮ ಆಂತರಿಕ ಕಲಹವು ನೂರು ಜನರಿಗೆ ನೂರು ರೀತಿಯ ಪ್ರೇರಣೆಯನ್ನು ನೀಡುತ್ತದೆ. ಇದನ್ನೇ ಹಿರಿಯರು ಮತ್ತೊಂದು ರೀತಿಯಲ್ಲಿ ಹೇಳಿದ್ದಾರೆ– ಬಾವಿಯನ್ನು ತೋಡಬೇಕು ಎಂದರೆ, ನೂರು ಕಡೆ ಹಳ್ಳಗಳನ್ನು ಇಷ್ಟಿಷ್ಟೇ ಆಳಕ್ಕೆ ತೋಡಿ ಬಿಟ್ಟುಬಿಡುವುದಲ್ಲ, ಬದಲಿಗೆ ಒಂದೇ ಜಾಗದಲ್ಲಿ 100 ಅಡಿಯನ್ನು ತೋಡುವುದು ಅಂತ. ಆಗ ಶ್ರಮವೂ ಕಡಿಮೆಯಾಗುತ್ತದೆ ಮತ್ತು ಪ್ರಯೋಜನವೂ ದಕ್ಕುತ್ತದೆ. ಆದರೆ ಸ್ವತಂತ್ರ ಮನೋಭಾವದ ಕೆಲವರಿಗೆ ಈ ಪ್ರಪಂಚದ ರೀತಿ–ರಿವಾಜುಗಳ ಭಾರತೀಯರು ಎಂಬ ಹೆಮ್ಮೆಯ ಭಾವದಲ್ಲಿ ಬದುಕಬೇಕು.

ಇಂಥದೊಂದು ಒಗ್ಗಟ್ಟಿಲ್ಲದೆ ನಾವು ದೇಶವನ್ನು ಪ್ರಗತಿಯ ಪಥದತ್ತ ಕೊಂಡೊಯ್ಯಲು ಸಾಧ್ಯವೇ ಇಲ್ಲ. ನಮ್ಮೊಬ್ಬರಿಂದ ನಿರ್ದಿಷ್ಟ ಕಾರ್ಯಭಾರವು ನೆರವೇರದೆ ಇರಬಹುದು, ಆದರೆ ಅದು ನೆರವೇರಲು ಎಲ್ಲರೂ ಆ ಕಾರ್ಯಭಾರದ ಭಾಗವಾಗಬೇಕು. ನಮ್ಮ ಧರ್ಮದ ಬಗ್ಗೆ, ರಾಷ್ಟ್ರದ ಬಗ್ಗೆ, ಪರಂಪರೆಯ ಬಗ್ಗೆ ನಾವೇ ಒಡಕು ಮಾತುಗಳನ್ನಾಡಿದರೆ, ಬೇರೆಯವರು ಅದನ್ನು ಹಾಳುಗೆಡಹುವುದಕ್ಕೆ ಹೆಚ್ಚು ಸಮಯ ಹಿಡಿಯುವುದಿಲ್ಲ.

ಆದ್ದರಿಂದಲೇ ಚಿಕ್ಕ ಚಿಕ್ಕ ವಿಚಾರಗಳಿಗೆಲ್ಲ ಜಗಳವಾಡದೆ, ದೇಶಾಭಿಮಾನವನ್ನು ಮೈಗೂಡಿಸಿಕೊಂಡು, ಎಲ್ಲರೂ ಒಗ್ಗಟ್ಟಾಗಿ ನಿಂತು ದೇಶದ ಭವಿಷ್ಯಕ್ಕಾಗಿ ದುಡಿಯಬೇಕು. ನಾವೆಲ್ಲರೂ ಒಗ್ಗಟ್ಟಾಗಿದ್ದಾಗ ಮಾತ್ರವೇ ಎಂಥದೇ ದುರ್ಭರ ಪರಿಸ್ಥಿತಿ ಎದುರಾದರೂ ಅದನ್ನು ನಿಭಾಯಿಸುವ ಶಕ್ತಿ ನಮ್ಮ ದೇಶಕ್ಕೆ ದಕ್ಕುತ್ತದೆ.

ಸರ್ವೇ ಜನಾಃ ಸುಖಿನೋ ಭವಂತು, ಸಮಸ್ತ ಸನ್ಮಂಗಳಾನಿ ಭವಂತು.

– ರೂಪಾ ಗುರುರಾಜ್

14-10-2025 ದಿನ ಭವಿಷ್ಯ

ಮೇಷ: ನಿಮ್ಮ ಮನಸ್ಸು ಒಳ್ಳೆಯ ವಿಷಯಗಳನ್ನು ಗ್ರಹಿಸುತ್ತದೆ. ಆರ್ಥಿಕ ನಿರ್ಬಂಧಗಳನ್ನು ತಪ್ಪಿಸಲು ನಿಮ್ಮ ಬಜೆಟ್‌ಗೆ ಅಂಟಿಕೊಳ್ಳಿ. ಕೆಲಸದ ಒತ್ತಡ ಕಡಿಮೆಯಿದ್ದು ನೀವು ಕುಟುಂಬದ ಸದಸ್ಯರ ಜೊತೆಗಿನ ಸಮಯವನ್ನು ಆನಂದಿಸುವ ಒಂದು ದಿನ. ಕೆಲಸದ ಪ್ರದೇಶದಲ್ಲಿ ನಿಮ್ಮ ಯಾವುದೇ ಸ್ಪರ್ಧಿಗಳು ಇಂದು ನಿಮ್ಮ ವಿರುದ್ಧ ಸಂಚು ರೂಪಿಸಬಹುದು.

ವೃಷಭ: ನಿಮ್ಮ ಕಚೇರಿಯನ್ನು ಬೇಗನೆ ಬಿಡಲು ಮತ್ತು ನೀವು ನಿಜವಾಗಿಯೂ ಆನಂದಿಸುವದನ್ನು ಮಾಡಲು ಪ್ರಯತ್ನಿಸಿ. ಹಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಇಂದು ಪರಿಹರಿಸಬಹುದು ಮತ್ತು ನೀವು ಹಣದಿಂದ ಲಾಭ ಪಡೆಯಬಹುದು.

ಮಿಥುನ: ಅನಾವಶ್ಯಕವಾಗಿ ವಾದ ಮಾಡಿ ನಿಮ್ಮ ಶಕ್ತಿಯನ್ನು ವ್ಯರ್ಥ ಮಾಡಬೇಡಿ. ನೀವು ಒಂದು ವಾದದಿಂದ ಏನನ್ನೂ ಪಡೆಯದಿದ್ದರೂ ಏನಾದರೂ ಕಳೆದುಕೊಳ್ಳುತ್ತೀರೆಂದು ನೆನಪಿಟ್ಟುಕೊಳ್ಳಿ. ಉದ್ಯೋಗಕ್ಕೆ ಸಂಬಂಧಿಸಿರುವ ಜನರಿಗೆ ಇಂದು ಹಣದ ಬಹಳಷ್ಟು ಅಗತ್ಯವಿರುತ್ತದೆ. ಪ್ರೇಮಜೀವನವು ಇಂದು ನಿಮ್ಮನ್ನು ಆಶೀರ್ವದಿಸಿರುವಂತೆ ತೋರುತ್ತದೆ.

ಕರ್ಕಾಟಕ: ಪತ್ನಿಯ ವ್ಯವಹಾರಗಳಲ್ಲಿ ಮೂಗು ತೂರಿಸುವುದು ಅವಳಿಗೆ ಕೋಪ ತರಬಹುದಾದ್ದರಿಂದ ಹಾಗೆ ಮಾಡಬೇಡಿ. ನಿಮ್ಮ ಕೆಲಸ ನೋಡಿಕೊಳ್ಳುವುದು ಉತ್ತಮ. ಆದಷ್ಟು ಕಡಿಮೆ ಹಸ್ತಕ್ಷೇಪ ಮಾಡಿ, ಇಲ್ಲದಿದ್ದರೆ ಅದು ಅವಲಂಬನೆಯನ್ನು ಉಂಟುಮಾಡ ಬಹುದು. ಅನಿರೀಕ್ಷಿತ ಬಿಲ್‌ಗಳು ಹಣಕಾಸಿನ ಹೊರೆಯನ್ನು ಹೆಚ್ಚಿಸುತ್ತದೆ.

ಸಿಂಹ: ನೀವು ಇದು ಒಳ್ಳೆಯ ಆರೋಗ್ಯ ಹೊಂದಿರುವುದರಿಂದ ಅದು ನಿಮಗೆ ಯಶಸ್ಸು ನೀಡುವ ಸಾಧ್ಯತೆಯಿದೆ. ಆದರೆ ನಿಮ್ಮ ಶಕ್ತಿಯನ್ನು ನಾಶಪಡಿಸುವ ಎಲ್ಲವನ್ನೂ ನೀವಿಂದು ತಪ್ಪಿಸಬೇಕು. ಇಂದು ನೀವು ಒಳ್ಳೆಯ ಹಣ ಮಾಡುತ್ತೀರಿ – ಆದರೆ ಅದು ನಿಮ್ಮ ಕೈಯಿಂದ ಜಾರಿಹೋಗದಿರಲು ಪ್ರಯತ್ನಿಸಿ. ಚಿಲ್ಲರೆ ಮತ್ತು ಸಗಟು ವ್ಯಾಪಾರಿಗಳಿಗೆ ಒಳ್ಳೆಯ ದಿನ.

ಕನ್ಯಾ: ಇಂದು ನಿಮ್ಮನ್ನು ಆವರಿಸುವ ಭಾವನಾತ್ಮಕ ಮನಸ್ಥಿತಿಯಿಂದ ನೀವು ಹೊರಬರಲು ಬಯಸಿದರೆ ಹಿಂದಿನದ್ದೆಲ್ಲವನ್ನೂ ಮರೆತುಬಿಡಬೇಕು. ಹೆಚ್ಚುವರಿ ಹಣವನ್ನು ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಬೇಕು. ಕೆಲವರು ಅವರಿಗೆ ಸಾಧ್ಯವಿರುವುದಕ್ಕಿಂತ ಹೆಚ್ಚು ನೀಡುವ ಭರವಸೆ ನೀಡುತ್ತಾರೆ. ವ್ಯಾಪಾರ ಸಹವರ್ತಿಗಳು ಬೆಂಬಲ ನೀಡುತ್ತಾರೆ.

ತುಲಾ: ಧಾರ್ಮಿಕ ಭಾವನೆಗಳನ್ನು ಉದ್ಭವಿಸಿ ಒಬ್ಬ ಪವಿತ್ರ ವ್ಯಕ್ತಿಯಿಂದ ದೈವಿಕ ಜ್ಞಾನವನ್ನು ಪಡೆಯಲು ನೀವು ಒಂದು ಧಾರ್ಮಿಕ ಸ್ಥಳಕ್ಕೆ ಭೇಟಿ ನೀಡುವಂತೆ ಮಾಡುತ್ತವೆ. ದೀರ್ಘ ಕಾಲ ಬಾಕಿಯಿದ್ದ ಬಾಕಿಗಳು ಕೊನೆಗೂ ದೊರಕುತ್ತವೆ. ಇಂದು ಪ್ರಣಯಕ್ಕಾಗಿ ಸಂಕೀರ್ಣ ಜೀವನವನ್ನು ತ್ಯಜಿಸಿ.

ವೃಶ್ಚಿಕ: ನೀವು ಹೇರಳ ಶಕ್ತಿಯನ್ನು ಹೊಂದಿರುತ್ತೀರಿ – ಆದರೆ ಕೆಲಸದ ಒತ್ತಡ ನಿಮ್ಮನ್ನು ಉದ್ವಿಗ್ನಗೊಳಿಸುವಂತೆ ತೋರುತ್ತದೆ. ಹಣದ ಪ್ರಾಮುಖ್ಯತೆ ನಿಮಗೆ ಚೆನ್ನಾಗಿ ಗೊತ್ತಿದೆ, ಆದ್ದರಿಂದ ಇಂದು ನಿಮ್ಮ ಮೂಲಕ ಉಳಿಸಲಾಗಿರುವ ಹಣ ನಿಮ್ಮ ತುಂಬಾ ಕೆಲಸಕ್ಕೆ

ಚ.ರಾ.ಪಟ್ಟಣ: ಅದ್ಧೂರಿ ಗಣಪತಿ ವಿಸರ್ಜನೆ

ವಿವಿಧ ಕಲಾತಂಡಗಳ ಮೆರವಣಿಗೆ | ಧರ್ಮಧ ಆಧಾರದ ಮೇಲೆ ಸದೃಢವಾಗಿ ಬೆಳೆದಿರುವ ಭಾರತ | ಶಾಸಕ ಸಿ.ಎನ್.ಬಾಲಕೃಷ್ಣ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಇಲ್ಲಿನ ಶ್ರೀ ಪ್ರಸನ್ನ ಗಣಪತಿ ಸೇವಾ ಸಮಿತಿಯು ಶ್ರೀ ಪ್ರಸನ್ನ ಗಣಪತಿ ಆಸ್ಥಾನ ಮಂಟಪದಲ್ಲಿ ಪ್ರತಿಷ್ಠಾಪಿಸಿರುವ ಶ್ರೀ ಪ್ರಸನ್ನ ಗಣಪತಿ ಮೂರ್ತಿಯ ವಿಸರ್ಜನಾ ಮಹೋತ್ಸವವು ಭಾರತೀಯ ಸಂಸ್ಕೃತಿಯನ್ನು ಮೇಳೈಸಿದಂತೆ ನಾಡಿನ ನಾನಾ ಕಡೆಯಿಂದ ಆಗಮಿಸಿದ್ದ ಆಕರ್ಷಣೀಯವಾದ ಜನಪದ ಕಲಾ ತಂಡಗಳು ಮೆರವಣಿಗೆಯಲ್ಲಿ ಸಾಗಿ ಸಾವಿರಾರು ಜನರ ಸಮ್ಮುಖದಲ್ಲಿ ಸೋಮವಾರ ವಿಜೃಂಭಣೆಯಿಂದ ನೆರವೇರಿತು.

74 ವರ್ಷಗಳ ಇತಿಹಾಸ ಉಳ್ಳ ತಾಲ್ಲೂಕಿನ ಶ್ರೀ ಪ್ರಸನ್ನ ಗಣಪತಿ ಸೇವಾ ಸಮಿತಿಯವರು ಪ್ರತಿಷ್ಠಾಪಿಸಿರುವ ಶ್ರೀ ಪ್ರಸನ್ನ ಗಣಪತಿ ವಿಸರ್ಜನಾ ಮಹೋತ್ಸವಕ್ಕೆ ಶಾಸಕ ಸಿ.ಎನ್.ಬಾಲಕೃಷ್ಣ ಸೋಮವಾರ ತಮಟೆ ಬಾರಿಸುವ ಮೂಲಕ ಚಾಲನೆ ನೀಡಿದರು. ನಂತರ ಮಾತನಾಡಿ, ಭಾರತ ಧರ್ಮಧ ಆಧಾರದ ಮೇಲೆ ಸದೃಢವಾಗಿ ಬೆಳೆದಿರುವ ದೇಶ, ದೇಶದ ಆಚಾರ-ವಿಚಾರ, ಸಂಸ್ಕೃತಿ ಮುಂದುವರಿಸುತ್ತಿರುವುದು ಸಂತಸ ತಂದಿದೆ. ಸನಾತನ ಧರ್ಮದ ಆಚರಣೆಗೆ ಇಂತಹ ಧಾರ್ಮಿಕ ಆಚರಣೆಗಳು ಶಕ್ತಿಯನ್ನು ನೀಡುತ್ತವೆ. ಸರ್ವರ ಸಹಕಾರದಿಂದ ಚನ್ನರಾಯಪಟ್ಟಣದ ಶ್ರೀ ಪ್ರಸನ್ನ ಗಣಪತಿ ಸೇವಾ ಸಮಿತಿ 48 ದಿನಗಳ ಕಾಲ ಗಣಪತಿಯನ್ನು ಪ್ರತಿಷ್ಠಾಪಿಸಿ ನಿತ್ಯ ಅನ್ನದಾಸೋಹದ ಪ್ರಸಾದ ವಿನಿಯೋಗದ ಸೇರಿದಂತೆ ದೇಶದ ಸಂಸ್ಕೃತಿಯನ್ನು ಬಿಂಬಿಸುವಂತಹ ಸಾಂಸ್ಕೃತಿಕ ಕಾರ್ಯಕ್ರಮಗಳು ಆಯೋಜಿಸಿ ವಿಶ್ವವಿಖ್ಯಾತ ದಸರಾ ಮಹೋತ್ಸವದ ರೀತಿಯಲ್ಲಿ ಗಣೇಶೋತ್ಸವ ಆಚರಿಸುವ ಮೂಲಕ ಹೆಸರುವಾಸಿಯಾಗಿದೆ ಎಂದರು.

ವಿಸರ್ಜನಾ ಪೂಜೆ, ನಂತರ ಪಟ್ಟಣದ ಗಣಪತಿ ಪೆಂಡಾಲಿನಿಂದ ವಿಸರ್ಜನಾ ಮೆರವಣಿಗೆ ಆರಂಭವಾಯಿತು. ಕಲಾವಿದ ರವೀಂದ್ರ ನಿರ್ಮಿಸರುವ ವಿಶೇಷವಾದ ದರ್ಬಾರ್ ಪುಷ್ಪ ಮಂಟಪದಲ್ಲಿ ಶ್ರೀಯವರನ್ನು ಕೂರಿಸಿ ಮಹಿಳಾ ತಂಡದಿಂದ ಸ್ಯಾಕ್ಸೋಫೋನ್ ಮಂಗಳವಾದ್ಯ, ಕಾಡು ಸಿದ್ದೇಶ್ವರ ಮಠದ ಆನೆ, ಚಾಮುಂಡೇಶ್ವರಿ ರಥ, ಕೇರಳದ ಚಂಡೆ ವಾದ್ಯ, ಕೇರಳದ ನರ್ತಕಿಯರು, ಕೇರಳದ ಯಕ್ಷಗಾನ, ಕೇರಳದ ಹುಲಿ, ಪೂಜಾ ಕುಣಿತ, ವೀರಭದ್ರನ ಕುಣಿತ, ಭದ್ರಕಾಳಿ ನರ್ತನ, ನಂದಿ ಧ್ವಜ, ಸಾಗರದ ಡೊಳ್ಳು ಕುಣಿತ, ಶ್ರೀ ವೆಂಕಟೇಶ್ವರ ದರ್ಶನ, ಕೋಟೆ ಮಾರಮ್ಮ, ಶ್ರೀ ಕೋಟೆ ಚಂದ್ರಮೌಳೇಶ್ವರ, ಶ್ರೀ ಮೇಗಲಗೇರಿ ಕಾಡು ಆಂಜನೇಯ ಉತ್ಸವಮೂರ್ತಿಗಳು, ರೋಡ್ ಆರ್ಕೆಸ್ಟ್ರಾ, ತಮಟೆ ವಾದ್ಯ, ತಾಲ್ಲೂಕಿನ ಭಜನಾ ತಂಡವರಿಂದ ಭಜನೆ ಮತ್ತು 30ನೇ ನಂಬರಿನ ಬಿಡಿಯವರಿಂದ ಕರಾವಳಿ ಕುಣಿತ, ಸೃಷ್ಟಿ ಆರ್ಟ್ಸ್ ತಂಡದಿಂದ ಗೊಂಬೆ ಕುಣಿತ, ಕೀಲು ಕುದುರೆ ಹಾಗೂ ಇನ್ನೂ ಹಲವಾರು ಜಾನಪದ ಕಲಾವಿದರಿಂದ ವಿಸರ್ಜನಾ ಮೆರವಣಿಗೆಯು ಆಕರ್ಷಣೆಗಳಾಗಿದ್ದವು. ಕಿವಿಗಡಚ್ಚಿಕ್ಕುವ ಸ್ಪೀಕರ್ ಗಳಿಂದ ಕೆ ಆರ್ ಸರ್ಕಲ್ ರಂಗು ಪಡೆದಿತ್ತು. ಇಡೀ ಸರ್ಕಲ್‌ನಲ್ಲಿ ಸಾವಿರಾರು ಯುವಕರು ಜಮಾಯಿಸಿದ್ದರು. ಡಿಜೆ ಸದ್ದಿಗೆ ಹೆಜ್ಜೆ ಹಾಕಿದರು. ಸ್ಥಳೀಯ ಕಲಾವಿದರು ವಿವಿಧ ಹಾಡುಗಳ ಮ್ಯೂಸಿಕ್ ಪ್ರದರ್ಶಿಸಿ ಯುವಕರಲ್ಲಿ ಸ್ಫೂರ್ತಿ ತುಂಬಿದರು. ದಾರಿಯುದ್ದಕ್ಕೂ ಮಹಿಳೆಯರು, ಮಕ್ಕಳು ಸಹಸ್ರ ಸಂಖ್ಯೆಯಲ್ಲಿ ಗಣಪತಿ ವಿಸರ್ಜನೆಯ ಮೆರವಣಿಗೆಯನ್ನು ವೀಕ್ಷಿಸಿದರು. ಹೂಗಳನ್ನು ಮತ್ತು ನೀರನ್ನು ರಸ್ತೆಗೆ ಹಾಕಿ ಗಣೇಶನನ್ನು ಕಲಾತಂಡಗಳ ಮೂಲಕ ಬೀಳ್ಕೊಡಲಾಯಿತು. ರಾತ್ರಿ ಊರಿನ ಶ್ರೀ ರಾಮ ವೃತ್ತ ಅಮಾನಿಕೆರೆಯಲ್ಲಿ ಪ್ರಸನ್ನ ಗಣಪತಿಯನ್ನು ಜಲಸ್ತಂಭನ ನಡೆಯಿತು.

ಶ್ರೀ ಪ್ರಸನ್ನ ಗಣಪತಿ ಸೇವಾ ಸಮಿತಿ ಪ್ರತಿ ವರ್ಷ ವೈವಿಧ್ಯಮಯ ಕಾರ್ಯಕ್ರಮಗಳ ಮೂಲಕ ವಿವಿಧ ಕಲಾ ತಂಡಗಳಾದ ಕೋಲಾಟ, ಡೊಳ್ಳು ಕುಣಿತ, ಜಾನಪದ ವೈಶಿಷ್ಟ ತಂಡಗಳನ್ನು ಕರೆಸುತ್ತಾರೆ. ಸಮಸ್ತ ಜನರ ವೀಕ್ಷಣೆಗಾಗಿ ಹಗಲಿನಲ್ಲಿ ಗಣಪತಿಯನ್ನು ಮೆರವಣಿಗೆ ಮಾಡುವ ಪದ್ಧತಿ ವೈಶಿಷ್ಟಪೂರ್ಣವಾಗಿದೆ.

ಕಾರ್ಯಕ್ರಮದಲ್ಲಿ ಶ್ರೀ ಪ್ರಸನ್ನ ಗಣಪತಿ ಸೇವಾ ಸಮಿತಿಯ ಗೌರವಾಧ್ಯಕ್ಷ ಸಿ.ಕೆ.ಕೃಷ್ಣ, ಅಧ್ಯಕ್ಷ ಸಿ.ಎನ್. ಅಶೋಕ್, ಉಪಧ್ಯಕ್ಷ ನಂಜುಂಡ ಮೈಮ್, ಕಾರ್ಯದರ್ಶಿ ಸಿ.ವೈ. ಸತ್ಯನಾರಾಯಣ, ಖಜಾಂಚಿ ಸಿ.ಎಸ್. ಮನೋಹರ್, ಸಹ ಕಾರ್ಯದರ್ಶಿ ಮಹದೇವ್, ಲಕ್ಷ್ಮೀನಾರಾಯಣ ಗುಪ್ತ, ಪದಾಧಿಕಾರಿಗಳು ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಸಿ.ಎನ್.ವೆಂಕಟೇಶ್ ಇನ್ನಿತರರು ಉಪಸ್ಥಿತರಿದ್ದರು.

ಕ್ರೀಡಾಕೂಟ: ರಾಜ್ಯಮಟ್ಟಕ್ಕೆ ಆಯ್ಕೆ

ಹಾಸನ: 2025-26 ನೇ ಸಾಲಿನ ಹಾಸನ ಜಿಲ್ಲಾಮಟ್ಟದ ಪದವಿ ಪೂರ್ವ ಕಾಲೇಜು ಕ್ರೀಡಾಕೂಟದಲ್ಲಿ ಶಾಂತಿಗ್ರಾಮ ಕಾಲೇಜಿನ ಬಾಲಕಿಯರು ಕಬಡ್ಡಿಯಲ್ಲಿ ಹಾಗೂ ಬಾಲಕರು ಬಾಲ್ ಬ್ಯಾಡ್ಮಿಂಟನ್‌ನಲ್ಲಿ ಗೆದ್ದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ. ಈ ಕ್ರೀಡಾಪಟುಗಳಿಗೆ ಕಾಲೇಜಿನ ಪ್ರಾಂಶುಪಾಲ ಕೃಷ್ಣಪ್ರಸಾದ್ ಅಭಿನಂದಿಸಿದ್ದಾರೆ.

ಅ.17 ರಂದು ಮೈಸೂರಿನಲ್ಲಿ ಉದ್ಯೋಗ ಮೇಳ

ಹಾಸನ: ಮಹಾರಾಜ ಕಾಲೇಜು ಮೈದಾನ, ಮೈಸೂರು ಇಲ್ಲಿ ಅ.17 ರಂದು ಕೌಶಲ್ಯದಿಂದ ಉದ್ಯೋಗದ ಕಡೆಗೆ ಯುವ ಸಮೃದ್ಧಿ ಸಮ್ಮೇಳನ ಮೈಸೂರು ಉದ್ಯೋಗ ಮೇಳವನ್ನು ಬೆಳಿಗ್ಗೆ 9 ರಿಂದ ಸಂಜೆ 5 ರವರೆಗೆ ಆಯೋಜಿಲಾಗಿದೆ.

ಅ.17 ರಂದು ಫಲಪುಷ್ಪ ಪ್ರದರ್ಶನ ಉದ್ಘಾಟನೆ

• ಪ್ರಜೋದಯ ವರದಿ

ಹಾಸನ: ಶ್ರೀ ಹಾಸನಾಂಬ ದೇವಿ ದರ್ಶನ ಮತ್ತು ಶ್ರೀ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವದ ಅಂಗವಾಗಿ ಅ.17 ರಿಂದ ಅ.20 ರವರೆಗೆ ಸಿಲ್ವರ್ ಜುಬಿಲಿ ಆರ್ಚರ್ಡ್ ಪಾರ್ಕ್‌ನಲ್ಲಿ ಫಲಪುಷ್ಪ ಪ್ರದರ್ಶನವನ್ನು ಆಯೋಜಿಸಲಾಗಿದೆ. ಅ.17 ರಂದು ಬೆ.11 ಗಂಟೆಗೆ ಸಿಲ್ವರ್ ಜುಬಿಲಿ ಆರ್ಚರ್ಡ್ ಪಾರ್ಕ್‌ನಲ್ಲಿ ಫಲಪುಷ್ಪ ಪ್ರದರ್ಶನ ಉದ್ಘಾಟನೆ ಮಾಡಲಾಗುತ್ತದೆ.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಭೈರೇಗೌಡ ಅವರು ಫಲಪುಷ್ಪ ಪ್ರದರ್ಶನ ಉದ್ಘಾಟನೆ ಮಾಡಲಿದ್ದಾರೆ. ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಗೌರವ ಉಪಸ್ಥಿತಿ ವಹಿಸಲಿದ್ದಾರೆ.

ರಾಜ್ಯ ಗೃಹ ಮಂಡಳಿಯ ಅಧ್ಯಕ್ಷರು ಹಾಗೂ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಪುಷ್ಪ ಕಲಾಕೃತಿಗಳ ಉದ್ಘಾಟನೆ ಮಾಡಲಿದ್ದು, ಶಾಸಕ ಸ್ವರೂಪ್ ಪ್ರಕಾಶ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದ ಶ್ರೇಯಸ್ ಎಂ.ಪಟೇಲ್ ಅವರು ಪ್ರದರ್ಶನಾ ಮಳಿಗೆಗಳ ಉದ್ಘಾಟನೆ ಮಾಡಲಿದ್ದಾರೆ.

ಶಾಸಕರುಗಳಾದ ಹೆಚ್.ಡಿ. ರೇವಣ್ಣ, ಡಾ.ಸಿ.ಎನ್.ಬಾಲಕೃಷ್ಣ, ಎ.ಮಂಜು, ಹೆಚ್.ಕೆ.ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಶಾಸಕರುಗಳಾದ ಮಧು ಜಿ. ಮಾದೇಗೌಡ, ಕೆ.ವಿವೇಕಾನಂದ, ಡಾ|| ಸೂರಜ್ ರೇವಣ್ಣ ಹಾಗೂ ಮಹಾನಗರ ಪಾಲಿಕೆಯ ಮಹಾಪೌರರಾದ ಗಿರೀಶ್ ಚನ್ನವಿರಪ್ಪ ಅವರು ಭಾಗವಹಿಸಲಿದ್ದಾರೆ.

ಜಿಲ್ಲಾ ಪಂಚಾಯಿತಿ ಸಿಇಒ ಹಾಗೂ ಹೇಮಾವತಿ ತೋಟಗಾರಿಕೆ ಸಂಘದ ಅಧ್ಯಕ್ಷರಾದ ಬಿ.ಆರ್. ಪೂರ್ಣಿಮಾ ಅವರ ಅಧ್ಯಕ್ಷತೆಯಲ್ಲಿ ಅ.20 ರಂದು ಅಪರಾಹ್ನ 4 ಗಂಟೆಗೆ ಫಲಪುಷ್ಪ ಪ್ರದರ್ಶನದ ಸಮಾರೋಪ ಮತ್ತು ಬಹುಮಾನ ವಿತರಣೆ ಮಾಡಲಾಗುತ್ತದೆ.

ಫಲಪುಷ್ಪ ಪ್ರದರ್ಶನದ ಪ್ರಯುಕ್ತ ಆಯೋಜಿಸಲಾಗಿರುವ ಸ್ಪರ್ಧೆಗಳು: ಮನೆ, ಖಾಸಗಿ ಸಂಸ್ಥೆಗಳು ಹಾಗೂ ಸರ್ಕಾರಿ ಶಾಲೆ, ಕಚೇರಿಗಳ ಅಂಗಳದಲ್ಲಿ ಅಲಂಕಾರಿಕ ತೋಟ ನಿರ್ವಹಣೆ ಸ್ಪರ್ಧೆ, ಅನುಪಯುಕ್ತ ವಸ್ತುಗಳಾದ ಪ್ಲಾಸ್ಟಿಕ್, ಬಕೆಟ್, ಟೈರುಗಳು, ಬಾಟಲಿಗಳು ಇತ್ಯಾದಿ ಬಳಸಿ ಉದ್ಯಾನ ಸೌಂದರ್ಯೀಕರಣದ ಸ್ಪರ್ಧೆ, ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆ ವಿಷಯಾಧಾರಿತ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

• ಪ್ರಜೋದಯ ವರದಿ

ಹಾಸನ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ ಅ.15 ರಂದು ಎತ್ತಿನಹೊಳೆ ಯೋಜನೆಯ ನಾಲೆಯ ಕಾಮಗಾರಿಗೆ ಹೈಟೆನ್ಷನ್ ಗೋಪುರಗಳನ್ನು ಸ್ಥಳಾಂತರಿಸುವ ಕೆಲಸವನ್ನು ಹಮ್ಮಿಕೊಳ್ಳಲಾಗಿದೆ.



ಬೆಳಿಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಬೆಳಗುಂಬ, ವಿ.ವಿ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಕೆಲ್ಲಂಗೆರೆ, ಎಂ. ಕೊಪ್ಪಲು, ದುಮ್ಮೇನಹಳ್ಳಿ, ಟಿ.ಕೋಡಿಹಳ್ಳಿ, ಮಲ್ಲೇನಹಳ್ಳಿ, ಛಲ್ಲಾಪುರ, ಸಂಕಲಾಪುರ, ರಾಮಸಾಗರ, ಗಂಡಸಿ ವಿ.ವಿ ಕೇಂದ್ರದಿಂದ ಹಿರಿಯಾಳು, ಚಗಚಗೆರೆ, ಬಾಗೇಶಪುರ, ಮಹದೇವರಹಳ್ಳಿ, ಕುಡುಕುಂದಿ, ಹಬ್ಬನಘಟ್ಟ, ಮುದುಡಿ, ಹೆಗ್ಗಟ್ಟ, ಯಡುವನಹಳ್ಳಿ, ಗಂಡಸಿ ಟೌನ್ ಹಾಗೂ ಕೊಂಡೆನಾಳು ವಿ.ವಿ ಕೇಂದ್ರದಿಂದ ಶಿವಪುರ, ಬಾಗೂರನಹಳ್ಳಿ, ಚಿಂದೇನಹಳ್ಳಿ ಗಡಿ, ಹುಲ್ಲೇಕೆರೆ, ಕೆಂಕೆರೆ, ರಾಮೇನಹಳ್ಳಿ, ಆಲದಹಳ್ಳಿ, ಗಾಂಧಿನಗರ, ಬಾಗೇವಾಳು, ಲಿಂಗ್ಲಾಪುರ, ವಾಟರ್ ವರ್ಕ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಕವಿಪ್ರನಿನಿ, ಹಾಸನ ಕಾರ್ಯಾಚರಣೆಗಳ ವಿಭಾಗದ ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ) ತಿಳಿಸಿದ್ದಾರೆ.

ಹಿರಿಯ ರಂಗಕರ್ಮಿ ರಾಜು ತಾಳಿಕೋಟೆ ನಿಧನ

• ಪ್ರಜೋದಯ ವರದಿ

ಬೆಂಗಳೂರು: ಹಿರಿಯ ರಂಗಕರ್ಮಿ ರಾಜು ತಾಳಿಕೋಟೆ ಅವರು ಹೃದಯಾಘಾತದಿಂದ ನಿಧನರಾಗಿದ್ದಾರೆ. ಧಾರವಾಡ ರಂಗಾಯಣ ನಿರ್ದೇಶಕರಾಗಿ ಅವರು ಕಾರ್ಯ ನಿರ್ವಹಿಸುತ್ತಿದ್ದರು. ಹಾಸ್ಯ ನಟನಾಗಿ, ರಂಗಕರ್ಮಿಯಾಗಿ ಅವರು ಗುರುತಿಸಿಕೊಂಡಿದ್ದರು.

ಉಡುಪಿಯ ಮಣಿಪಾಲ್ ಆಸ್ಪತ್ರೆಯಲ್ಲಿ ರಾಜು ತಾಳಿಕೋಟೆ ಮೃತರಾಗಿದ್ದಾರೆ. ಭಾನುವಾರದಿಂದ (ಅ.12) ಮೂರು ದಿನ ಶೂಟಿಂಗ್ ಮಾಡಬೇಕಿತ್ತು. ಆದರೆ ಅಷ್ಟರಲ್ಲಿ ಅವರು ನಿಧರಾಗಿದ್ದು, ಚಿತ್ರತಂಡಕ್ಕೆ ದೊಡ್ಡ ಆಘಾತ ಆಗಿದೆ.

ಶೈನ್‌ಶೆಟ್ಟಿ ನಟನೆಯ ಹೊಸ ಸಿನಿಮಾದ ಶೂಟಿಂಗ್ ಸಲುವಾಗಿ ರಾಜು ತಾಳಿಕೋಟೆ ಅವರು ಉಡುಪಿಗೆ ಬಂದಿದ್ದರು. ಚಿತ್ರೀಕರಣ ಮುಗಿಸಿ ರಾತ್ರಿ ವಿಶ್ರಾಂತಿ ಪಡೆಯುತ್ತಿರುವಾಗ ಭಾನುವಾರ ರಾತ್ರಿ ಹೃದಯಾಘಾತ ಆಯಿತು. ಕೂಡಲೇ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಬರಲಾಯಿತು. ಆದರೂ ಕೂಡ ಅವರು ಬದುಕಿ ಉಳಿಯಲಿಲ್ಲ ಎಂದು ಕುಟುಂಬದವರು ಮಾಹಿತಿ ನೀಡಿದ್ದಾರೆ.

ಈ ಮೊದಲು ಕೂಡ ರಾಜು ತಾಳಿಕೋಟೆ ಅವರಿಗೆ ಹೃದಯಾಘಾತ ಆಗಿತ್ತು. ಆಗ ಚಿಕಿತ್ಸೆ ನೀಡಿ ಸ್ಟಂಟ್ ಹಾಕಲಾಗಿತ್ತು. ಈಗ ಒತ್ತಡ ಜಾಸ್ತಿ ಆಗಿದ್ದರಿಂದ ಮತ್ತೆ ಹಾರ್ಟ್ ಅಟ್ಯಾಕ್ ಆಗಿರಬಹುದು. ವಿಜಯಪುರದಲ್ಲಿ ಅಂತ್ಯಸಂಸ್ಕಾರ ಮಾಡಲಾಗುವುದು ಎಂದು ಅವರ ಪುತ್ರ ತಿಳಿಸಿದ್ದಾರೆ.

ಹಲವು ವರ್ಷಗಳಿಂದ ಬಣ್ಣದ ಲೋಕದಲ್ಲಿ ರಾಜು ತಾಳಿಕೋಟೆ ಅವರು ಸಕ್ರಿಯರಾಗಿದ್ದರು. ಮನಸಾರೆ, ಪಂಚರಂಗಿ, ಲೈಫು ಇಷ್ಟೇನೇ, ರಾಜಧಾನಿ, ಅಲೆಮಾರಿ, ಮೈನಾ, ಟೋಪಿವಾಲಾ ಮುಂತಾದ ಸಿನಿಮಾಗಳಲ್ಲಿ ಅವರು ಅಭಿನಯಿಸಿದ್ದರು. ಬಿಗ್ ಬಾಸ್ ಕನ್ನಡ ಸೀಸನ್ 7 ರಿಯಾಲಿಟಿ ಶೋನಲ್ಲಿ ಅವರು ಸ್ಪರ್ಧಿಸಿದ್ದರು. ಕಿರುತೆರೆಯ ಕೆಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

ನಿನ್ನೆ ರಾತ್ರಿ 12 ಗಂಟೆಗೆ ರಾಜು ತಾಳಿಕೋಟೆ ಅವರಿಗೆ ಉಸಿರಾಟದ ತೊಂದರೆ ಆಯಿತು. ನಾನೇ ಆಸ್ಪತ್ರೆಗೆ ಕರೆದುಕೊಂಡು ಬಂದೆ. ಚಿಕಿತ್ಸೆ ನೀಡಲಾಗುತ್ತಿತ್ತು. ನಮ್ಮ ಸಿನಿಮಾದ ಶೂಟಿಂಗ್‌ನಲ್ಲಿ 2 ದಿನ ಭಾಗವಹಿಸಿದ್ದರು. ಸಿನಿಮಾಗೆ ಇನ್ನೂ ಶೀರ್ಷಿಕೆ ಇಟ್ಟಿಲ್ಲ ಎಂದು ನಟ ಶೈನ್ ಶೆಟ್ಟಿ ಅವರು ಹೇಳಿದ್ದಾರೆ.

ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನ

• ಪ್ರಜೋದಯ ವರದಿ

ಹಾಸನ: ಪಿಯುಸಿ, ಸ್ನಾತಕ, ವೃತ್ತಿಪರ ಸ್ನಾತಕ, ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ವಿದ್ಯಾಭ್ಯಾಸ ಮುಂದುವರಿಸಲು ಬಯಸುವ ಕರ್ನಾಟಕ ಗ್ರಾಮೀಣ ಪ್ರದೇಶದ ಆರ್ಥಿಕವಾಗಿ ಹಿಂದುಳಿದ ಅರ್ಹ ವಿದ್ಯಾರ್ಥಿಗಳಿಗೆ ಧರ್ಮಾರ್ಥ ಸಂಸ್ಥೆಯಾದ ಕೃಷಿಕ್ ಸರ್ವೋದಯ ಫೌಂಡೇಶನ್(ರಿ.) ಹಾಸನ ಶಾಖೆ ಇವರ ವತಿಯಿಂದ 2025-26ನೇ ಸಾಲಿಗೆ ವಿದ್ಯಾರ್ಥಿ ವೇತನ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಗ್ರಾಮೀಣ ಪ್ರದೇಶದ ಆರ್ಥಿಕವಾಗಿ ಹಿಂದುಳಿದ ವ್ಯವಸಾಯ ಆಧಾರಿತ ಕುಟುಂಬಗಳ (ಆದಾಯ ದೃಢೀಕರಣ ಪತ್ರ ಲಗತಿಸಬೇಕು.)

ಒಂದು ಹೆಕ್ಟೆರ್‌ಗಿಂತ ಕಡಿಮೆ ಒಣ ಭೂಮಿಯುಳ್ಳ ಸಣ್ಣ, ಅತಿ ಸಣ್ಣ ವ್ಯವಸಾಯಗಾರರ ಮಕ್ಕಳು (ಪಹಣಿ ಲಗತ್ತಿಸಬೇಕಾಗುತ್ತದೆ.)

ವ್ಯವಸಾಯ ಕೂಲಿ ಕಾರ್ಮಿಕರ ಮಕ್ಕಳು, ಗ್ರಾಮೀಣ ಪ್ರದೇಶದ ಶಾಲೆಯಲ್ಲಿ 10ನೇ ತರಗತಿಯವರೆಗೆ ವ್ಯಾಸಂಗ ಮಾಡಿರಬೇಕು.

ಮೇಲಿನಂತೆ ಅರ್ಹತೆಯುಳ್ಳ ಗ್ರಾಮೀಣ ಹಿನ್ನೆಲೆಯ ವಿದ್ಯಾರ್ಥಿಗಳು ತಮ್ಮ ಅರ್ಜಿಗಳನ್ನು 2025 ನವಂಬರ್ ತಿಂಗಳ 30 ನೆ ದಿನಾಂಕದ ಒಳಗೆ ನೋಂದಣಿ ಮಾಡಿಕೊಳ್ಳಬೇಕಾಗಿ ಕೋರಿದೆ.

ಮಾಹಿತಿಗಾಗಿ ಕೃಷಿಕ್ ಸರ್ವೋದಯ ಫೌಂಡೇಶನ್ (ರಿ), ಹಾಸನ ಶಾಖೆ, ಮೊದಲನೇ ಮಹಡಿ, ಕೃಷಿಕ್ ಸರ್ವೋದಯ ಭವನ, ರೆಡ್ ಕ್ರಾಸ್ ಪಕ್ಕ, ಸಾಲಗಾಮೆ ರಸ್ತೆ, ಹಾಸನ 573202, ದೂರವಾಣಿ: 87924 59334 ಪ್ರಜ್ವಲ್ (ಶೈಕ್ಷಣಿಕ ಸಂಯೋಜಕರು) ಇವರನ್ನು ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ಲಾಸ್ಟಿಕ್ ಬಳಕೆ ನಿಷೇಧ ಕಾನೂನಿನಲ್ಲಿ ನ್ಯೂನ್ಯತೆ: ಶಾಸಕ ಮಂಜು

• ಪ್ರಜೋದಯ ವರದಿ

ಅರಕಲಗೂಡು: ಪ್ಲಾಸ್ಟಿಕ್ ಬಳಕೆ ನಿಷೇಧ ಕುರಿತು ರೂಪಿಸಿರುವ ಕಾನೂನಿನಲ್ಲಿ ನ್ಯೂನ್ಯತೆಗಳಿದ್ದು ಸರ್ಕಾರ ಸರಿಪಡಿಸುವ ಕೆಲಸ ಮಾಡಬೇಕು ಎಂದು ಶಾಸಕ ಎ.ಮಂಜು ಆಗ್ರಹಿಸಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ಸೋಮವಾರ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸುವರ್ಣ ಮಹೋತ್ಸವ ಪ್ರಯುಕ್ತ ಹಮ್ಮಿಕೊಂಡಿದ್ದ ಪರಿಸರ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರ ಎಲ್ಲದಕ್ಕೂ ಕಾನೂನು ರೂಪಿಸಿದೆ ಹೊರತು ಅದು ಸರಿಯಾಗಿ ಪಾಲನೆಯಾಗುತ್ತಿದೆಯೇ ಎನ್ನುವುದು ಯಕ್ಷಪ್ರಶ್ನೆಯಾಗಿದೆ. ಉಚಿತ ವಿದ್ಯುತ್ ಸೇರಿದಂತೆ ಪ್ಲಾಸ್ಟಿಕ್ ತಯಾರಿಕೆಗೆ ಅಗತ್ಯವಿರುವ ಸೌಲಭ್ಯಗಳನ್ನು ಸಹ ಸರ್ಕಾರವೇ ಒದಗಿಸುತ್ತಿದೆ. ಪ್ಲಾಸ್ಟಿಕ್ ಉತ್ಪಾದನೆಗೆ ಮಹತ್ವಕೊಟ್ಟು ತಪ್ಪೆಸಗುತ್ತಿದ್ದು ಇನ್ನು ನಿಷೇಧ ಎಲ್ಲಿಂದ ಬರಬೇಕು ಎಂದು ಪ್ರಶ್ನಿಸಿದರು.

ಕಾನೂನಿನಲ್ಲಿ ಸಾಕಷ್ಟು ಲೋಪದೋಷಗಳು ಎದ್ದುಕಾಣಿಸುತ್ತಿವೆ. ಇಷ್ಟಲ್ಲದೆ ರಾಜಕಾರಣಿಗಳು ಹಾಗೂ ಬಂಡವಾಳಶಾ

ಮಲಗಿದ ಜಾಗದಿಂದ ಮಗು ನಾಪತ್ತೆ

• ಪ್ರಜೋದಯ ವರದಿ

ಹಾಸನ: ನಗರದ ಹೊಸ ಬಸ್ ನಿಲ್ದಾಣ ಎದುರಿನ ಸೇತುವೆ ಕೆಳಗಡೆ ತಂದೆ-ತಾಯಿ ಜೊತೆ ಮಲಗಿದ್ದ ಮೂರುವರೆ ವರ್ಷದ ಮಗು ನಾಪತ್ತೆಯಾಗಿದ್ದು ಅಪಹರಣದ ಶಂಕೆ ವ್ಯಕ್ತವಾಗಿದೆ.

ಮುರುಳಿ ಹಾಗು ಲಕ್ಷ್ಮೀ ಎಂಬುವವರ ಮಗು ಮನೋಜ್ ನಾಪತ್ತೆಯಾಗಿರುವ ಮಗು. ಸ್ವಂತ ಸೂರಿ ಲ್ಲದೆ ಬೀರನಹಳ್ಳಿ ಕೆರೆಯಲ್ಲಿ ಗುಡಿಸಲು ಕಟ್ಟಿಕೊಂಡಿದ್ದ ದಂಪತಿ ಕಳೆದ ಮೂರು ತಿಂಗಳಿಂದ ಬಸ್ ನಿಲ್ದಾಣದ ಸೇತುವೆ ಕೆಳಗಡೆ ಮಲಗುತ್ತಿದ್ದರು. ಕೂಲಿ ಕೆಲಸ ಮಾಡಿಕೊಂಡಿದ್ದ ಅವರು ಬಾಡಿಗೆ ಮನೆ ಹೊಂದಲು ಆರ್ಥಿಕ ಸ್ಥಿತಿವಂತರಾಗಿಲ್ಲ.

ಭಾನುವಾರ ರಾತ್ರಿ ಮೂವರು ಒಟ್ಟಿಗೆ ಮಲಗಿದ್ದರು. ರಾತ್ರಿ 1 ಗಂಟೆಗೆ ಲಕ್ಷ್ಮೀ ನೀರು ಕುಡಿಯುವುದಕ್ಕಾಗಿ ಎದ್ದಾಗ ಮಗು ಮಲಗಿತ್ತು. ಬೆಳಿಗ್ಗೆ 4 ಗಂಟೆಗೆ ನೋಡಿದಾಗ ಮಗು ಇಲ್ಲದಿರುವುದು ಗೊತ್ತಾಗಿದೆ. ತಕ್ಷಣವೇ ಎಲ್ಲಾ ಕಡೆ ಹುಡುಕಿದರೂ ಸಿಕ್ಕಿಲ್ಲ. ಮಾರ್ಗದಲ್ಲಿ ಸಿಸಿಟಿವಿ ಕ್ಯಾಮರಾ ಇಲ್ಲದಿರುವುದು ಹಾಗು ರಾತ್ರಿಯಾದ್ದರಿಂದ ಮಗುವಿನ ಹುಡುಕಾಟಕ್ಕೆ ತೊಡಕಾಗಿದೆ. ಮಗುವನ್ನು ಯಾರಾದರೂ ಅಪಹರಿಸಿದರೇ ಎಂಬ ಆತಂಕವು ಪೋಷಕರನ್ನು ಕಾಡುತ್ತಿದೆ. ಮೂರುವರೆ ವರ್ಷದ ಮನೋಜ್, 2.10 ಅಡಿ ಎತ್ತರ, ಸಾಧಾರಣ ಮೈ ಕಟ್ಟು, ದುಂಡು ಮುಖ, ಎಡ ಮೂಗಿನ ಹತ್ತಿರ ಸುಟ್ಟ ಗಾಯ ಕಲೆ ಇದೆ. ಮಗು ಬಿಳಿ ಬಣ್ಣದ ಜರ್ಕಿನ್ ಹಾಗು ಪ್ಯಾಂಟ್ ಧರಿಸಿದೆ. ಈತನ ಸುಳಿವು ಸಿಕ್ಕರೆ ಹಾಸನ ನಗರ ಠಾಣೆ ದೂ.ಸಂ. 08172-268333 ಅಥವಾ 94808 04745 ಇಲ್ಲಿಗೆ ಸಂಪರ್ಕಿಸಲು ತಿಳಿಸಿದೆ.

ಕರೂರು ಕಾಲ್ತುಳಿತ ಪ್ರಕರಣ ತನಿಖೆ ಸಿಬಿಐಗೆ

• ಪ್ರಜೋದಯ ವರದಿ

ನವದೆಹಲಿ: ತಮಿಳಿಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಅಧ್ಯಕ್ಷ, ನಟ ವಿಜಯ್ ಅವರ ರ್‍ಯಾಲಿ ವೇಳೆ ಕರೂರಿನಲ್ಲಿ ನಡೆದ ಕಾಲ್ತುಳಿತ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಿ ಸುಪ್ರೀಂ ಕೋರ್ಟ್ ಸೋಮವಾರ ಆದೇಶಿಸಿದೆ.

ನ್ಯಾಯಮೂರ್ತಿಗಳಾದ ಜೆ.ಕೆ.ಮಾಹೇಶ್ವರಿ ಮತ್ತು ಎನ್.ವಿ.ಅಂಜಾರಿಯಾ ಅವರ ಪೀಠವು ಸಿಬಿಐ ತನಿಖೆಯ ಮೇಲ್ವಿಚಾರಣೆಗೆ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅಜಯ್ ರಸ್ತೋಗಿ ನೇತೃತ್ವದ ಸಮಿತಿಯನ್ನೂ ನೇಮಿಸಿದೆ.

ವಿಜಯ್ ಅವರು ಸೆ.27ರಂದು ಕರೂರಿನಲ್ಲಿ ರ್‍ಯಾಲಿ ನಡೆಸಿದ್ದ ವೇಳೆ ಕಾಲ್ತುಳಿತ ಸಂಭವಿಸಿತ್ತು. ಕಾಲ್ತುಳಿತ ದಲ್ಲಿ 41 ಮಂದಿ ಮೃತಪಟ್ಟಿದ್ದರು. ಎಸ್‌ಐಟಿ ರಚನೆಗೆ ಮದ್ರಾಸ್ ಹೈಕೋರ್ಟ್ ನೀಡಿದ ಆದೇಶವನ್ನು ಪ್ರಶ್ನಿಸಿ ಟಿವಿಕೆ ಪಕ್ಷ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಅ. 10ರಂದು ನಡೆಸಿದ್ದ ಪೀಠ, ಆದೇಶವನ್ನು ಕಾಯ್ದಿರಿಸಿತ್ತು.

ಪ್ರಕರಣಕ್ಕೆ ಸಂಬಂಧಿಸಿದ ಅರ್ಜಿಗಳನ್ನು ವಿಚಾರಣೆಗೆ ಪರಿಗಣಿಸಿದ್ದಕ್ಕೆ ಮತ್ತು ಎಸ್‌ಐಟಿ ತನಿಖೆಗೆ ಆದೇಶಿಸಿ ದ್ದಕ್ಕಾಗಿ ಮದ್ರಾಸ್ ಹೈಕೋರ್ಟ್‌ನ ನ್ಯಾಯಮೂರ್ತಿ ಎನ್. ಸೆಂಥಿಲ್‌ಕುಮಾರ್ ಅವರನ್ನು ಪೀಠವು ತರಾಟೆಗೆ ತೆಗೆದುಕೊಂಡಿತು. ಪ್ರಕರಣದ ತನಿಖೆಗೆ ಕೋರಿ ಸಲ್ಲಿಸಿರುವ ಅರ್ಜಿಗಳು ಮದುರೈ ಪೀಠದ ಮುಂದೆ ಬಾಕಿ ಇರುವಾಗ ಹಾಗು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯವರ ಆದೇಶವಿಲ್ಲದೆಯೇ ಅರ್ಜಿಗಳನ್ನು ಪುರಸ್ಕರಿಸಲು ಸೆಂಥಿಲ್ ಕುಮಾರ್ ಅವರಿಗೆ ಅವಕಾಶವಿರಲಿಲ್ಲ ಎಂದು ಹೇಳಿತು.

ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ಸ್ವತಂತ್ರ ತನಿಖೆ ನಡೆಸಬೇಕೆಂದು ಟಿವಿಕೆ ಆಗ್ರಹಿಸಿತ್ತು. ಎಸ್‌ಐಟಿಯಲ್ಲಿ ತಮಿಳುನಾಡಿನ ಪೊಲೀಸ್ ಅಧಿಕಾರಿಗಳು ಮಾತ್ರ ಇದ್ದಾರೆ. ಅವರಿಂದ ನಿಷ್ಪಕ್ಷಪಾತ ತನಿಖೆ ಸಾಧ್ಯವಿಲ್ಲ ಎಂದು ಹೇಳಿತ್ತು.

ಔತಣ ಕೂಟದಲ್ಲಿ ಸಂಪುಟ ಪುನಾರಚನೆ ಪ್ರಸ್ತಾಪ

» **ಮೊದಲನೇ ಪುಟದಿಂದ**

ಹೈಕಮಾಂಡ್ ನಿರ್ಧಾರದ ಆಧಾರದ ಮೇಲೆ ರಾಜ್ಯದಲ್ಲಿ ನಾಯಕತ್ವ ಬದಲಾವಣೆ ನಡೆಯಬಹುದು. ಇದಕ್ಕೆ ಶಾಸಕರ ಬೆಂಬಲದ ಅಗತ್ಯ ವಿಲ್ಲವೆಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ನೀಡಿದ್ದ ಹೇಳಿಕೆಗೆ ಪ್ರತಿಕ್ರಿಯಿಸಿ, ಶಾಸಕರ ಬೆಂಬಲದ ಜೊತೆಗೆ ಹೈಕಮಾಂಡ್‌ನ ಆಶೀರ್ವಾದವೂ ಅಗತ್ಯವೆಂದ ಅವರು, ನವೆಂಬರ್ ಕ್ರಾಂತಿಯ ಬಗ್ಗೆ ಕೇಳಿದಾಗ, ಕ್ರಾಂತಿ, ಬ್ರಾಂತಿ ಎಲ್ಲಾ ಇಲ್ಲ. ಎಲ್ಲಾ ಭ್ರಮೆ ಎಂದು ಹೇಳಿದರು.

ವಾಲ್ಮೀಕಿ ಸಮಾಜದವರಿಗೆ ಸಚಿವ ಸ್ಥಾನ ನೀಡಲಾಗುವುದೇ ಎಂಬ ಬಗ್ಗೆ ಪ್ರತಿಕ್ರಿಯೆ ನೀಡಿ, ಶಾಸಕರು ರಾಜಿನಾಮೆ ನೀಡಿದ್ದು, ಸರ್ಕಾರ ಅವರನ್ನು ತೆಗೆದು ಹಾಕಿಲ್ಲ. ಮುಂದಿನ ದಿನಗಳಲ್ಲಿ ನಡೆಯುವ ಸಂಪುಟ ಪುನರ್ ರಚನೆಯ ಸಂದರ್ಭದಲ್ಲಿ ವಾಲ್ಮೀಕಿ ಸಮುದಾಯದವರಿಗೆ ಪ್ರಾತಿನಿಧ್ಯ ನೀಡುವ ಬಗ್ಗೆ ಪರಿಶೀಲಿಸಲಾಗುವುದು ಎಂದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಗೃಹ ಸಚಿವ ಪರಮೇಶ್ವರ ಅವರು, ನಮ್ಮಲ್ಲಿ ಸರ್ಕಾರ ರಚನೆ ಮಾಡುವಾಗ, ಸಿಎಲ್‌ಪಿ ಲೀಡರ್ ಅಂದರೆ ಮುಖ್ಯಮಂತ್ರಿಗಳ ನೇಮಕ ಮಾಡುವಾಗ ಶಾಸಕರ ಅಭಿಪ್ರಾಯ ಕೇಳಲು ಹೈಕಮಾಂಡ್‌ನಿಂದ ವೀಕ್ಷಕರು ಬರುತ್ತಾರೆ. ಅವರು ಶಾಸಕರ ಅಭಿಪ್ರಾಯ ಪಡೆದು, ಅದನ್ನು ಹೈಕಮಾಂಡ್‌ಗೆ ತಿಳಿಸುತ್ತಾರೆ. ಇಂತಹ ವರ ಪರ ಇಷ್ಟು ಜನ ಇದ್ದಾರೆಂದು ಹೇಳು ತ್ತಾರೆ. ಯಾರಿಗೆ ಮುಖ್ಯಮಂತ್ರಿ ಆಗುವ ಮೆಜಾರಿಟಿ ಬಂದಿದೆ ಎಂದು ಆ ನಂತರ ಹೆಸರು ಘೋಷಣೆ ಮಾಡುತ್ತಾರೆ. ಸಿದ್ದರಾಮಯ್ಯ ಅವರು ಮೊದಲ ಬಾರಿ ಮತ್ತು ಎರಡನೇ ಬಾರಿ ಮುಖ್ಯಮಂತ್ರಿ ಆದಾ ಗಲೂ ಇದೇ ರೀತಿಯ ಪ್ರಕ್ರಿಯೆ ನಡೆದಿದೆ. ಎಸ್.ಎಂ.ಕೃಷ್ಣ ಅವರನ್ನು ಮುಖ್ಯಮಂತ್ರಿ ಯನ್ನಾಗಿ ಮಾಡಿದಾಗಲೂ ಅದೇ ಪ್ರಕ್ರಿಯೆ ಯನ್ನು ಅನುಸರಿಸಲಾಯಿತು. ಆದರೆ, ಶಾಸ ಕರ ಅಭಿಪ್ರಾಯ ಅಗತ್ಯವಿಲ್ಲವೆಂದು ಹೈಕ ಮಾಂಡ್ ಹೇಳಿದರೆ, ಅದು ಅವರಿಗೆ ಬಿಟ್ಟ ವಿಚಾರ. ಅದು ಅವರ ನಿರ್ಧಾರ. ಎಲ್ಲರೂ ಹೈಕಮಾಂಡ್ ನಿರ್ಧಾರಕ್ಕೆ ಬದ್ಧರಾಗಿರುತ್ತಾರೆಂದು ಅವರು ಹೇಳಿದರು.

ದರ್ಶನಕ್ಕೆ ಭಕ್ತರ ದಂಡು: ಸರದಿ ಸಾಲುಗಳು ಭರ್ತಿ

» **ಮೊದಲನೇ ಪುಟದಿಂದ**

ಮೂರುವರೆ ಗಂಟೆಗಳ ಕಾಲ ನಿಂತು ದರ್ಶನ ಪಡೆಯುವ ಮೂಲಕ ಸಾಮಾನ್ಯ ಭಕ್ತರು ಅನುಭವಿಸುತ್ತಿರುವ ಸಮಸ್ಯೆಯನ್ನು ಮನವರಿಕೆ ಮಾಡಿಕೊಂಡರು.

ನಾಲ್ಕನೇ ದಿನ ದೇವಿ ದರ್ಶನಕ್ಕೆ ಭಕ್ತರ ದಂಡೇ ಹರಿದು ಬಂದಿತ್ತು. ಬೆಳಿಗ್ಗೆ 5ರಿಂದ ಮಧ್ಯಾಹ್ನ 2ರವರೆಗೆ ಸಾರ್ವಜನಿಕರಿಗೆ ದರ್ಶನ ವ್ಯವಸ್ಥೆ ಮಾಡಲಾಗಿದ್ದು, ಮಧ್ಯಾಹ್ನ 2 ರಿಂದ 3.30ರವರೆಗೆ ನೈವೇದ್ಯ ಸಮಯದ ನಿಮಿತ್ತ ಗರ್ಭಗುಡಿ ಬಾಗಿಲು ಮುಚ್ಚಲಾಗಿತ್ತು. ಬಳಿಕ ಮಧ್ಯಾಹ್ನ 3.30 ರಿಂದ ಮಂಗಳವಾರ ಮುಂಜಾನೆ 3 ರವರೆಗೆ ನಿರಂತರವಾಗಿ ದರ್ಶನ ನಡೆಯಿತು.

ಶುಕ್ರವಾರದ ನಂತರ ಭಕ್ತ ಸಂಖ್ಯೆ ಅಧಿಕ: ಹಾಸನಾಂಬ ದರ್ಶನ ಸುಗಮವಾಗಿ ನಡೆಯುತ್ತಿದೆ. ಶನಿವಾರ ಮತ್ತು ಭಾನುವಾರ ಹೆಚ್ಚಿನ ಜನರು ಬಂದರೂ ನಿಗದಿತ ಅವಧಿಯಲ್ಲಿ ಎಲ್ಲರು ದರ್ಶನ ಪಡೆದುಕೊಂಡಿದ್ದಾರೆ. ಶುಕ್ರವಾರದ ನಂತರ ಬಹಳಷ್ಟು ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ನಿರೀಕ್ಷೆ ಇರುವುದರಿಂದ ಸಾಧ್ಯವಾದಷ್ಟು ಈ ಮೂರು ದಿನಗಳ ಒಳಗೆ ಆಗಮಿಸಿದರೆ ಸುಗಮವಾಗಿ ದರ್ಶನ ವಾಗುತ್ತದೆ. ಕೊನೆ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬರುವುದರಿಂದ ಉಂಟಾಗುವ ದಟ್ಟಣೆಯೂ ಕಡಿಮೆಯಾಗುವುದರಿಂದ ಎಲ್ಲರಿಗೂ ದರ್ಶನ ಲಭಿಸಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಮನವಿ ಮಾಡಿದ್ದಾರೆ.

ವಿಶೇಷ ದರ್ಶನದ ಸಾಲುಗಳು ಭರ್ತಿ

ಕಳೆದ ಮೂರು ದಿನಗಳಿಂದ ಖಾಲಿ ಇದ್ದ 1000 ರೂ. ಹಾಗು 300 ರೂ. ಟಿಕೆಟ್‌ನ ವಿಶೇಷ ದರ್ಶನದ ಸಾಲುಗಳಲ್ಲಿಯೂ ಭಕ್ತರ ಸಂಖ್ಯೆ ತುಸು ಹೆಚ್ಚಾಗಿತ್ತು. 300 ರೂ. ಟಿಕೆಟ್ ಪಡೆದರೂ ಒಂದೂವರೆ ಗಂಟೆಗಳ ಕಾಲ ಸರದಿ ಸಾಲಿನಲ್ಲಿ ನಿಲ್ಲಬೇಕಾಯಿತು.

ಮುಂಜಾನೆ 5 ಗಂಟೆಗೆ ಸಾರ್ವಜನಿಕ ದರ್ಶನ ಸರದಿ ಸಾಲಿನಲ್ಲಿ ನಿಂತಿದ್ದ ಭಕ್ತರು ಹಾಸನಾಂಬ ಮತ್ತು ಸಿದ್ದೇಶ್ವರ ಸ್ವಾಮಿ ದರ್ಶನ ಪಡೆದು ಹೊರ ಬರುವಷ್ಟರಲ್ಲಿ 9 ಗಂಟೆಯಾಗಿತ್ತು. ನೈವೇದ್ಯಕ್ಕಾಗಿ ಗರ್ಭಗುಡಿ ಬಾಗಿಲು ಮುಚ್ಚಿದ್ದರಿಂದ ಬೆಳಿಗ್ಗೆ 11 ಗಂಟೆಗೆ ದರ್ಶನಕ್ಕೆ ಆಗಮಿಸಿದ ಭಕ್ತರು 6 ಗಂಟೆಗಳ ಕಾಲ ಕ್ಯೂನಲ್ಲಿ ನಿಲ್ಲಬೇಕಾಯಿತು.

ಮಹಾದಾಯಿ ಯೋಜನೆ ನಿರ್ಲಕ್ಷ್ಯ ಸರಿಯಲ್ಲ

• ಪ್ರಜೋದಯ ವರದಿ

ಹಾಸನ: ಶರಾವತಿ ಹಿನ್ನೀರಿನಲ್ಲಿ ಪಂಪ್ ಸ್ಟೋರೇಜ್ ಮೂಲಕ ವಿದ್ಯುತ್ ಉತ್ಪಾದನಾ ಯೋಜನೆಗೆ ಆಸಕ್ತಿ ತೋರುವ ರಾಜ್ಯ ಸರ್ಕಾರ ಮಹಾದಾಯಿ ಯೋಜನೆ ಅನುಷ್ಠಾನಕ್ಕೆ ನಿರಾಸಕ್ತಿ ತೋರುತ್ತಿರುವುದೇಕೆ ಎಂದು ರೈತ ಸಂಘದ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಅವರು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಮಹಾದಾಯಿ ಯೋಜನೆ ಅನುಷ್ಠಾನ ಸಂಬಂಧ ಅರಣ್ಯ ಇಲಾಖೆ, ಮಾಲಿನ್ಯ ಇಲಾಖೆ ಅನುಮತಿ ಕೊಟ್ಟಿಲ್ಲ ಎನ್ನುತ್ತಾರೆ. ಅದೇ ಶರಾವತಿ ಯೋಜನೆಗೆ ಅನುಮತಿ ಪಡೆಯುತ್ತಾರೆ. ಆ ಕಾಮಗಾರಿಯನ್ನು ಖಾಸಗಿ ವ್ಯಕ್ತಿಗೆ ನೀಡಿದ್ದಾರೆ. ಅಲ್ಲಿ ಆಗುವ ಆರ್ಥಿಕ ಲಾಭ ಮಹಾದಾಯಿ ಯೋಜನೆಯಿಂದ ಆಗುವುದಿಲ್ಲವೆಂಬ ಕಾರಣಕ್ಕೆ ನಿರ್ಲಕ್ಷ್ಯ ವಹಿಸುತ್ತಿದ್ದಾರೆಂದು ಆರೋಪಿಸಿದರು.

ತಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಮೇಕೆದಾಟು ಅಣೆಕಟ್ಟು ನಿರ್ಮಿಸುತ್ತೇವೆಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶಪಥ ಮಾಡಿದ್ದರು. ಸಿದ್ದರಾಮಯ್ಯ ಸೇರಿ ಕಾಂಗ್ರೆಸ್‌ನ ಘಟಾನುಘಟಿ ನಾಯಕರು ಪಾದಯಾತ್ರೆ ನಡೆಸಿದ್ದರು. ಅಧಿಕಾರಕ್ಕೆ ಬಂದು ಎರಡೂವರೆ ವರ್ಷವಾದರೂ ಆ ನಿಟ್ಟಿನಲ್ಲಿ ಯಾವ ಕ್ರಮ ಕೈಗೊಂಡಿಲ್ಲ. ಯಾವ ರಾಜ ಕಾರಣಿಗಳು ಚುನಾ ವಣಾ ಪೂರ್ವ ನೀಡಿದ ಹೇಳಿಕೆಗೆ ಬದ್ಧರಾಗಿರುವುದಿಲ್ಲ. ಓಟಿನ ಆಸೆಗೆ ಜನರಿಗೆ ಆಸೆ ಹುಟ್ಟಿಸುತ್ತಾರೆಂದು ಆಕ್ರೋಶ ವ್ಯಕ್ತಪಡಿಸಿದರು.

ಎನ್‌ಡಿಆರ್‌ಎಫ್‌ಗೆ ಕಾಯಬೇಡಿ

ಉತ್ತರ ಕರ್ನಾಟಕದ ಕಲಬುರಗಿ, ಯಾದಗಿರಿ, ವಿಜಯಪುರ ಜಿಲ್ಲೆಗಳಲ್ಲಿ ಭಾರೀ ಮಳೆಯಾಗಿ ಅಪಾರ ನಷ್ಟವುಂಟಾಗಿದೆ. ರಾಜ್ಯ ಸರ್ಕಾರ ಎನ್‌ಡಿಆರ್‌ಎಫ್ ಪರಿಹಾರ ಬರುವ ವರೆಗೆ ಕಾಯದೆ ತಕ್ಷಣ ತನ್ನ ಪಾಲಿನ ಜವಾಬ್ದಾರಿ ನಿರ್ವಹಿಸಬೇಕೆಂದು ಆಗ್ರಹಿಸಿದರು.

ಪರಿಹಾರ ಹಂಚಿಕೆ ವಿಚಾರದಲ್ಲಿ ಕೇಂದ್ರ ದಿಂದ ಬರುವ ವರೆಗೆ ಕೊಡದೆ ರಾಜ್ಯ ಸರ್ಕಾರ ಸತಾಯಿಸುತ್ತದೆ. 2023ರಲ್ಲಿ ಉಂಟಾದ ಅನಾವೃಷ್ಟಿಯಿಂದ 36 ಸಾವಿರ ಕೋಟಿ ರೂ. ನಷ್ಟವಾ ಗಿದೆಯೆಂದು ಘೋಷಿಸಿದರು. ಕೇಂದ್ರದಿಂದ 400 ಕೋಟಿ ರೂ. ಹಾಗು ರಾಜ್ಯ ಸರ್ಕಾರದಿಂದ ಕೇವಲ 200 ಕೋಟಿ ರೂ. ಪರಿಹಾರ ಬಿಡುಗಡೆ ಆಯಿತು. ಹೀಗಾದರೆ ಅನ್ನದಾತರು ಬದುಕು ವುದು ಹೇಗೆಂದು ಪ್ರಶ್ನಿಸಿದರು.

ಈ ಬಾರಿ ತಾರತಮ್ಯ ಮಾಡದೆ ನಷ್ಟದ ಪ್ರಮಾಣ ಅಂದಾಜಿಸಿ ಸರ್ವಸಮ್ಮತ ಪರಿಹಾರ ನೀಡಬೇಕು. ಉಭಯ ಸರ್ಕಾರಗಳು ಎಚ್ಚರಿಕೆಯಿಂದ ನಿಭಾಯಿಸಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಬಾಬು, ರಾಜ್ಯ ಮುಖಂಡ ಮಹ ಮದ್ ಸಾದಿಕ್, ಕಾರ್ಮಿಕ ವಿಭಾಗದ ಅರುಣ್ ಕುಮಾರ್, ತಾಲ್ಲೂಕು ಮುಖಂಡರಾದ ಹರಿಹರನ್, ಚೇತನ ಇತರರು ಹಾಜರಿದ್ದರು.

ಚೇತನ್ ಗುರೂಜಿ ಅವರಿಂದ 100 ಬಾರಿಗೆ ರಕ್ತದಾನ | ಆರೋಗ್ಯ ತಪಾಸಣಾ ಶಿಬಿರ

ನ.15ಕ್ಕೆ ಅಡಗೂರಿನಲ್ಲಿ ಬೃಹತ್ ರಕ್ತದಾನ ಶಿಬಿರ

• ಪ್ರಜೋದಯ ವರದಿ

ಹಾಸನ: ರಕ್ತದಾನ ಶ್ರೇಷ್ಠದಾನ ಎಂಬ ಮಾತನ್ನು ರುಜುವಾತು ಮಾಡಲು ಆರೋಗ್ಯವಂತರು ರಕ್ತದಾನದ ಮೂಲಕ ಇತರರ ಬಾಳಿಗೆ ನೆರವಾಗಿರುವುದನ್ನು ಕೇಳಿರುತ್ತೇವೆ. ಆದರೆ ಇಲ್ಲೊಬ್ಬ ವ್ಯಕ್ತಿ ಕಳೆದ 20 ವರ್ಷಗಳಲ್ಲಿ 99 ಬಾರಿ ರಕ್ತದಾನ ಮಾಡಿದ್ದು 100ನೇ ಬಾರಿಯ ರಕ್ತದಾನಕ್ಕೆ ಬೃಹತ್ ವೇದಿಕೆ ಸೃಷ್ಟಿಸಿದ್ದಾರೆ.

ತಾವು ರಕ್ತದಾನ ಮಾಡುವುದು ಮಾತ್ರವಲ್ಲದೆ ಬೇರೆಯವರಿಂದಲೂ ರಕ್ತದಾನದ ಮೂಲಕ 1 ಸಾವಿರ ಯೂನಿಟ್ ಸಂಗ್ರಹದ ಯೋಜನೆ ರೂಪಿಸಿದ್ದಾರೆ. ಈ ಅಸಾಧಾರಣ ವ್ಯಕ್ತಿಯೇ ಬೇಲೂರು ತಾಲ್ಲೂಕು ಅಡಗೂರಿನ ಬಸವ ಯೋಗ ಕೇಂದ್ರದ ಮುಖ್ಯಸ್ಥ ಚೇತನ್ ಗುರೂಜಿ. ನ.15ರ ಶನಿವಾರ ಅಡಗೂರು ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಬೃಹತ್ ಕಾರ್ಯಕ್ರಮ ನೆರವೇರಲಿದೆ.

ಇಪ್ಪತ್ತು ವರ್ಷಗಳ ಹಿಂದೆ ಆರಂಭವಾದ ಬಸವ ಯೋಗ ಕೇಂದ್ರ ಕೇವಲ ಯೋಗಾಭ್ಯಾಸ, ಪ್ರಾಣಾಮಾಯಕ್ಕೆ ಸೀಮಿತವಾಗದೆ ರಕ್ತದಾನ ಶಿಬಿರ, ಪರಿಸರ ದಿನಾಚರಣೆ, ರಕ್ತದಾನ ಶಿಬಿರಗಳ ಮೂಲಕ ನಿರಂತರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ. ಇದುವರೆಗೆ 10 ಸಾವಿರ ಯೂನಿಟ್ (ಬಾಟಲಿ) ರಕ್ತ ಸಂಗ್ರಹ ಮಾಡಿರುವುದು ಹೆಗ್ಗಳಿಕೆಯೇ ಸರಿ. ನ.15ರಂದು ರಕ್ತದಾನ ಶಿಬಿರದ ಜೊತೆಗೆ ಆರೋಗ್ಯ ತಪಾಸಣಾ ಶಿಬಿರ, ಕಣ್ಣಿನ ತಪಾಸಣೆ, ದಂತ ತಪಾಸಣೆ, ಹೃದಯ ತಪಾಸಣೆಗಾಗಿ ಇಸಿಜಿ, ಎಕೋ ಪರೀಕ್ಷೆ ಹಮ್ಮಿಕೊಳ್ಳಲಾಗಿದೆ. ಹಾಸನದ ಅಮ್ಮ ಕಣ್ಣಿನ ಆಸ್ಪತ್ರೆ ವತಿಯಿಂದ ನೇತ್ರ ತಪಾಸಣೆ, ವಿ ಕೇರ್ ಸೂಪರ್ ಸ್ಪೆಷಾಲಿಟಿ ಡೆಂಟಲ್ ಕೇರ್‌ನಿಂದ ದಂತ ತಪಾಸಣೆ, ಮಣಿ ಹಾಗು ಇಂಡಿಯಾನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಿಂದ ಹೃದಯ, ಮಹಾಲಕ್ಷ್ಮಿ ಮಂಜಪ್ಪ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ವರಿಂದ ಕೀಲು ಮತ್ತು ಮೂಳೆ ತಪಾಸಣೆ, ರಾಜೀವ್ ಆಯುರ್ವೇದ ಆಸ್ಪತ್ರೆಯಿಂದ ಆಯುರ್ವೇದ ಚಿಕಿತ್ಸೆ ಹಾಗು ಔಷಧಿ ವಿತರಣೆ ನಡೆಯಲಿದೆ. ಈ ಎಲ್ಲಾ ಆಸ್ಪತ್ರೆಗಳ ನುರಿತ ತಜ್ಞರು ಹಾಗು ಸಿಬ್ಬಂದಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು ಸಾರ್ವಜನಿಕರು ಉಚಿತವಾಗಿ ಸೌಲಭ್ಯ ಪಡೆಯ ಬಹುದು.

ಅನೇಕರಿಗೆ ಯೋಗ ಅರಿವು

ಬಸವ ಯೋಗ ಕೇಂದ್ರದ ಚೇತನ್ ಗುರೂಜಿ ಅವರು ಕಳೆದ ಎರಡು ದಶಕಗಳಿಂದ ಸಾರ್ವಜನಿಕರಲ್ಲಿ ಆರೋಗ್ಯದ ಅರಿವು ಮೂಡಿಸುವುದ ಕ್ಕಾಗಿ ತಮ್ಮ ಜೀವನ ಸಮರ್ಪಿಸಿದ್ದಾರೆ. ಇದುವರೆಗೆ 400ಕ್ಕೂ ಅಧಿಕ ಯೋಗ ಶಿಬಿರ ನಡೆಸಿದ್ದಾರೆ. ಜನರಲ್ಲಿ ದೇಹ ದಾನ ಹಾಗು ನೇತ್ರದಾನದ ಅರಿವು ಮೂಡಿಸಿದ್ದು ಸುಮಾರು 40 ಜನರು ಅವರ ಪ್ರೇರಣೆಯಿಂದ ದೇಹ ಹಾಗು 200 ಜನರು ನೇತ್ರದಾನಕ್ಕೆ ಒಪ್ಪಿದ್ದಾರೆ. ಸರ್ಕಾರಿ ಕಾಲೇಜು, ಪೊಲೀಸ್ ಇಲಾಖೆ, ಸರ್ಕಾರಿ ಕಚೇರಿಗಳಿಗೆ ತೆರಳಿ ಯೋಗ ಹಾಗು ಸದೃಢ ಆರೋಗ್ಯದ ಕುರಿತು ಕಾರ್ಯಾಗಾರಗಳನ್ನು ನಿರಂತರವಾಗಿ ನಡೆಸುತ್ತಿದ್ದಾರೆ.

**ಭಾರತದಲ್ಲಿ ಶೇ.10 ರಷ್ಟು ರಕ್ತದ ಅವಶ್ಯಕತೆಯಿದ್ದು ಈಗ ಲಭ್ಯವಿರುವುದು ಶೇ.0.3 ರಷ್ಟು ಮಾತ್ರ. ದೇಶಾದ್ಯಂತ ರಕ್ತದಾನ ಶಿಬಿರಗಳು ನಡೆಯುತ್ತ ವೆಯಾದರೂ ಬೇಡಿಕೆಗೆ ತಕ್ಕಷ್ಟು ಪೂರೈಕೆ ಸಾಧ್ಯವಾಗುತ್ತಿಲ್ಲ. ಹೆರಿಗೆ, ಅಪಘಾತ, ಶಸ್ತ್ರಚಿಕಿತ್ಸೆ ಸಂದರ್ಭದಲ್ಲಿ ರಕ್ತದ ಅವಶ್ಯಕತೆ ಹೆಚ್ಚಿರುತ್ತದೆ. ಆರೋಗ್ಯವಂತರು ರಕ್ತದಾನ ಮಾಡುವ ಮೂಲಕ ಇ